

ಅಪರಂಜಿ

ಸಂಪುಟ...೧
ಸಂಚಿಕೆ...೧೧
ಆಗಸ್ಟ್...೧೯೮೪

ನಗೆಯ ಕಾರಂಜಿ

ಈ ಸಂಚಿಕೆಯ ಲೇಖಕರು :

ಲೀಲಾ ಮಿರ್ಲೆ.
ಡಾ|| ಕೆ. ಕೃಷ್ಣಮೂರ್ತಿ.
ಶ್ರೀಮತಿ, ಜಯ್ ಕೆ. ಭಟ್, ಮದ್ರಾಸ್.
ಆನಂದ್.
ಶೀನೂ,
ರಮ್ಯ,
ಅ. ರಾ. ಸೇ.
ಕೇಫ,
ಸೋಮಿ,
ಡಾ|| ಕೆ. ಎ. ಅಶೋಕ ಪೈ,
ಚಿ. ರಾ. ಅಣ್ಣಾಜಿ,
ಮತ್ತು ಇತರರು.

ಗೌರವ ಸಲಹೆಗಾರರು ಅ. ರಾ. ಸೇ.
ಗೌ|| ಸಂಪಾದಕರು ಆರ್. ಶೇಷಗಿರಿರಾವ್.

ಅಪರಂಜಿ

ಗೌರವ ಸಲಹೆಗಾರರು :

ಶ್ರೀ ಅ.ರಾ.ಸೇ.

ಶ್ರೀ ಶಿವಕುಮಾರ್

ಪ್ರಕಾಶಕರು ಮತ್ತು ಸಂಪಾದಕರು

ಶ್ರೀ ಶೇಷಗಿರಿ.

ವಾರ್ಷಿಕ ಚಂದಾ : ರೂ. 25-00

ಮುದ್ರಣ :

ಶ್ರೀ ವೆಂಕಟೇಶ್ವರ ಪವರ್ ಪ್ರಿಂಟರ್ಸ್, ಪ್ರೈವೇಟ್ ಲಿಮಿಟೆಡ್
ಪೀಣ್ಯ, ಬೆಂಗಳೂರು-58.

ಮನವಿ.

ಕೊರವಂಜಿ ಅಪರಂಜಿಯೊಡನೆ ನಾಡಿಗೆ ಬಂದಿದ್ದಾಳೆ. ಕೊರವಂಜಿ ಬಳಗದವರು, ಹೊಸ ಲೇಖಕರೊಂದಿಗೆ ನಿಮಗಾಗಿ ತಿಳಿನಗೆಯ ಹೊನಲನ್ನು ಹರಿಸುತ್ತಾರೆ ಸದ್ಯಕ್ಕೆ ಚಂದಾದಾರರಿಗೆ ಮಾತ್ರ ಅಪರಂಜಿ ಲಭ್ಯ. ವಾರ್ಷಿಕ ಚಂದಾ ರೂ. 25-00 ನೀವೂ, ನಿಮ್ಮ ಮಿತ್ರರೂ ಚಂದಾದಾರರಾಗಿರಿ, ಜಾಹಿರಾತು ಕೊಡಿ. ಲೇಖಕರೂ ವ್ಯಂಗ್ಯ ಚಿತ್ರಕಾರರೂ ತಮ್ಮ ಕೃತಿಗಳನ್ನು ಕಳಿಸಿಕೊಡಲು ಪ್ರಾರ್ಥನೆ. ಅಪರಂಜಿ ನಿಮ್ಮದು. ಅದರ ಅಭಿವೃದ್ಧಿ ನಿಮಗೆ ಸೇರಿದ್ದು. ಚಂದಾ ಹಣವನು ಮನಿ ಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕಳಿಸಿಕೊಡಿ,

ಅಪರಂಜಿ ಕಾರ್ಯಾಲಯ,
ನಂ. 36, 6ನೇ ಮುಖ್ಯ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560 003.

ಆರ್. ಶೇಷಗಿರಿರಾವ್.
ಸಂಪಾದಕ.

ಈ ಸಂಚಿಕೆಯಲ್ಲಿ

ಸಂಪುಟ–೧ ಆಗಸ್ಟ್ ೧೯೮೪ ಸಂಚಿಕೆ–೧೧

ಈತನೇ ಒಳ್ಳೆಯ ಕರ್ಮವನ್ನು ಮಾಡುವಂತೆ ಮಾಡುತ್ತಾನೆ. ಯಾವನನ್ನು ಕೆಳಗಿಳಿಸಲು ಇಚ್ಛಿಸುವನೋ ಅವನನ್ನು ಈತನೇ ಕೆಟ್ಟ ಕೆಲಸವನ್ನು ಮಾಡುವಂತೆ ಮಾಡುತ್ತಾನೆ.

ಕೌಷೀತಕೀ.

ಈ ವರ್ಷ ಶ್ರೀ ಮಾಸ್ತಿವೆಂಕಟೇಶ ಅಯ್ಯಂಗಾರ್ ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತುದು ಕನ್ನಡಕ್ಕೆ ಒಂದು ಕೋಡುಮೂಡಿದಂತಾಗಿದೆ. ಮಾಸ್ತಿಯವರ ಬರಹ ಶುಚಿ, ಓಜಸ್ವಿ, ವಿವೇಕಪೂರ್ಣ ಹಾಗೂ ಉನ್ನತ ಚಿಂತನದ ಫಲ. ಅವರ ಇನ್ನೂ ಹಲವು ಉಜ್ವಲ ಕೃತಿಗಳು ಕನ್ನಡಕ್ಕೆ ಬರಲಿ ಎಂದು ಅಪರಂಜಿ ಹಾರೈಸುತ್ತಾಳೆ.

ಅವರ ಕತೆಗಳಿಗೆ ಪ್ರಶಸ್ತಿ ಸಿಕ್ಕಬೇಕಾಗಿತ್ತು, ಇನ್ನಾವುದೋ ಕಾದಂಬರಿಗೆ ಸಿಕ್ಕಬೇಕಾಗಿತ್ತು ಮೊದಲಾದ ಅಪಸ್ವರಗಳು ಕೇಳಿಬರುತ್ತಿವೆ. ಒಳ್ಳೆಯದಕ್ಕೆ ಮನ್ನಣೆ ಸಿಕ್ಕಾಗ ಹಿಗ್ಗುವುದೂ ಒಂದು ಹಿರಿಮೆ.

ಅಪರಂಜಿಯು ಪ್ರಥಮ ವರ್ಷ ಕೆಲವೇ ದಿನಗಳಲ್ಲಿ ತುಂಬಲಿದೆ. ಈ ಅವಧಿ ಪ್ರಯೋಗಾತ್ಮಕ್‌ವಾಗಿದ್ದು, ಅಭಿಮಾನಿಗಳ ತಾಳ್ಮೆ ಅಪರಂಜಿಗೆ ಶ್ರೀರಕ್ಷೆಯಾಗಿದೆ. ಜಾಹಿರಾತುದಾರರು ಚಂದಾದಾರರು, ಮುಂದಿನ ವರ್ಷದ ಚಂದಾಹಣವನ್ನು ಕೂಡಲೇ ಕಳಿಸಲು ಪ್ರಾರ್ಥನೆ.ಸಂಚಿಕೆಗಳು ತಲುಪದಿದ್ದವರು ವಿವರಗಳನ್ನು ತಿಳಿಸಿದರೆ ಅವನ್ನು ತಲುಪಿಸುವ ವ್ಯವಸ್ಥೆ ಮಾಡುತ್ತೇವೆ.

ಹಾಸ್ಯ ಲೇಖನ, ಲಘುಕವನ, ಚುಟಕಗಳು ವ್ಯಂಗ್ಯ ಚಿತ್ರಗಳು ಇತ್ಯಾದಿಗಳಿಗೆ ಸ್ವಾಗತ ೩೦-೪೦ ಪುಟಗಳ ಮಿನಿ ಕಾದಂಬರಿಗಳನ್ನೂ ಕಳುಹಿಸಬಹುದು.

ಅಂಚೆ ವೆಚ್ಚ, ಮತ್ತು ಒಂದು ವಿಶೇಷ ಸಂಚಿಕೆಯ ಹೆಚ್ಚಿನ ಮೌಲ್ಯಗಳನ್ನು ಗಮನಿಸಿ ೨೫ ರೂ. ಚಂದಾವನ್ನೇ ಮುಂದುವರಿಸಿದೆ.

ಸಂಪಾದಕ.

ಗಣೇಶನ ಬವಣೆ

ಸಂಸ್ಕೃತ ನಗೆಹನಿ — **ಡಾ|| ಕೆ.ಕೃಷ್ಣಮೂರ್ತಿ**

"ಸಾನಂದಂ ನಂದಿಹಸ್ತಾಹತ-ಮುರಜ-ರವಾಹೂತ-ಕೌಮಾರ-ಬರ್ಹಿ-ತ್ರಾಸತ್
ನಾಸಾಗ್ರ-ರಂಧ್ರಂ ವಿಶತಿ ಫಣಿಪತೌ ಭೋಗಸಂಕೋಚಭಾಜಿ ।
ಗಂಡೋಡ್ಡೀನಾಲಿ ಮಾಲಾ - ಮುಖರಿತ - ಕಕುಭಸ್ತಾಂಡವೇ ಶೂಲಪಾಣೇಃ
ವೈನಾಯಕ್ಯಶ್ಚಿರಂ ವೋ ವದನ ವಿಧುತಯಃ ಪಾಂತು ಚೇತ್ಕಾರ ವತ್ಸಃ ॥

— ಭವಭೂತಿ.

ಶಿವನ ಒಡ್ಡೋಲಗ ನೆರೆದಿದೆ. ನಟರಾಜನ ನಾಟ್ಯಕ್ಕೆ ಮೇಳ ಸಿದ್ಧವಾಗಿದೆ. ನಂದಿ ಮದ್ದಲೆ ಬಾರಿಸುತ್ತಿದ್ದಾನೆ. ಅದರ ಸದ್ದನ್ನು ಗುಡುಗೆಂದು ಭ್ರಮಿಸಿ, ಷಣ್ಮುಖನ ನವಿಲು ಓಡಿಬಂದು ಕುಣಿಯುತೊಡಗುತ್ತದೆ. ನವಿಲನ್ನು ಕಂಡ ಶಿವನ ಹಾವು ಹೆದರಿ ಅಡಗಲು ಬಿಲವನ್ನು ಹುಡುಕುತ್ತದೆ. ತನ್ನ ಹೆಡೆಯನ್ನು ಕುಗ್ಗಿಸಿಕೊಳ್ಳುತ್ತದೆ. ಮತ್ತೇನೂ ಕಾಣದೆ ಬಳಿಯಲ್ಲಿದ್ದ ಗಣಪತಿಯ ಸೊಂಡಲಿನ ರಂಧ್ರದಲ್ಲಿ ಹೊಕ್ಕು ಅಡಗಿಕೊಳ್ಳುತ್ತದೆ. ಇದರಿಂದ ಗಣಪತಿಗೆ ವಿಚಿತ್ರ ವೇದನೆಯಾಗಿ ಅವನು ತಲೆಯನ್ನು ಮತ್ತೆ ಮತ್ತೆ ಸುತ್ತಲೂ ತೂಗುತ್ತಾನೆ. ಆಗ ಗಂಡಸ್ಥಲದಲ್ಲಿದ್ದ ದುಂಬಿಗಳೆಲ್ಲಾ ಹಾರಿ ಜೊಯ್ಯೆಂದು ದಿಗ್ದಿಗಂತಗಳೆಲ್ಲಾ ಮೊಳಗುವಂತೆ ದನಿಗೈಯುತ್ತವೆ. ಅಂತಹ ಗಣಪತಿಗೆ ನಮ್ಮ ನಮಸ್ಕಾರ.

ಒಂದು ಹಳೆಯ ಜೋಕ್

ಶ್ರೀಮತಿ ಜಯ್ ಕೆ.ಭಟ್, ಮದ್ರಾಸ್.

ದಾಸಯ್ಯನೊಬ್ಬನು ಮನೆಯ ಮುಂದೆ ಶಂಖ ಊದಿ ಜಾಗಟೆ ಬಾರಿಸಿ, ಗೋವಿಂದಾ ಗೋಽಽವಿಂದಾಽಽ' ಎಂದು ಮೊರೆದು ಜಬರ್ದಸ್ತಿನಿಂದ

'ಭಿಕ್ಷೆ ಹಾಕುತ್ತೀರೋ ಇಲ್ಲವೊ ' ಎಂದ,
ಮನೆ ಯಜಮಾನಿ ಕೊಂಚ ಬೆದರಿ "ಹಾಕದಿದ್ದರೆ ? "
ಎಂದು ಕ್ಷೀಣವಾಗಿ ಕೇಳಿದಳು.

" ನಿನ್ನೆ , ಹಿಂದಿನ ಊರಿನಲ್ಲಿ ಮಾಡಿದ ಹಾಗೇ ಮಾಡಿಬಿಟ್ಟೇನು ಹುಷಾರ್ !! "
ಎಂದ ದಾಸಯ್ಯ.

ಗೃಹಿಣಿ ಬೆದರಿ " ಏನು ಮಾಡಿದೆ? " ಎಂದು ಕೇಳಿದಳು

" ಯಾರೂ ಭಿಕ್ಷೆ ಹಾಕಲಿಲ್ಲ, ಹಿಂದಿನ ಊರಿನಲ್ಲಿ, ನಿನ್ನೆ ಗುಡಿಯಲ್ಲಿ ಉಪವಾಸ ಮಲಗಿದ್ದೆ '' ಎಂದ ದಾಸಯ್ಯ.

ರಾಯಚೂರಿನಲ್ಲಿ ಕಟ್ಟಲಾದ Cooling Tower ಅಮೃತಸರದಲ್ಲಿದ್ದಿದ್ದರೆ ಚೆನ್ನಾಗಿತ್ತು ಅನ್ನುವುದು ಶುದ್ಧ ಕುಹಕ!

❋

ಪಂಜಾಬ್‌ನಲ್ಲಿ ಶಾಂತಸ್ಥಿತಿ; 75 ಜನರ ಬಂಧನ

–ಪತ್ರಿಕೆ

ಟೀಕೆಯ ಅಗತ್ಯವಿಲ್ಲ!

❋

ಉದ್ಯೋಗ ಇಲ್ಲ ಎಂದು ಕಾಲುನಡಿಗೆಯಲ್ಲಿ ಭಾರತ ಯಾತ್ರೆ

–ಸುದ್ದಿ

ಸರಿ, ಉದ್ಯೋಗ ಸಿಕ್ಕಿದಂತಾಯಿತಲ್ಲ.

❋

ಶ್ರೀಲಂಕಾ–ಪಾರ್ಥಸಾರಥಿ ಭೇಟಿ ಮತ್ತೆ ಇಲ್ಲ

–ಸುದ್ದಿ.

ಕಲಿಯುಗದಲ್ಲೂ ಕೃಷ್ಣಸಂಧಾನ ವ್ಯರ್ಥವಾದಂತೆ ಕಾಣುತ್ತದೆ!

❋

ಬೆಂಗಳೂರಿನ ಅಚ್ಚುಗಾಲಿ ಕಾರ್ಖಾನೆಗೆ ಕೇರಳದಿಂದ ವಿದ್ಯುತ್

–ದಿನಪತ್ರಿಕೆ.

ಗಾಲಿಗೆ ಏನಾದರೂ 'ಗಾಳ' ಸಿಕ್ಕಿಸಿಲ್ಲ ತಾನೆ!

❋

ನಿಜ ತಿರುಚುವ ರಾಜಕಾರಣಿ

–'ವಾಚಕರ ವಾಣಿ'

'ಇತರ' ರಾಜಕಾರಣಿಗಳೂ ಇದ್ದಾರೆಯೇ?

❋

ಹಗಲುಗಳ್ಳನ ಬೆನ್ನಟ್ಟಿ ಹಿಡಿದ ಮಹಿಳೆ

–ಶೀರ್ಷಿಕೆ.

ಆಕೆಯನ್ನು ಪೋಲೀಸ್ ಇಲಾಖೆಗೆ ಸಲಹೆಗಾರ್ತಿಯಾಗಿ ಸೇರಿಸುತ್ತಾರೆಂಬುದು ಸುಳ್ಳಂತೆ!

❋

ಸಚಿವ ರಘುಪತಿಗಳಿಗೆ ಅಮೆರಿಕದಲ್ಲಿ ಗಂಟಲು ಚಿಕಿತ್ಸೆ

–ಸುದ್ದಿ.

ಅವರ ರಾಜಕೀಯ ಸ್ವರ ಬದಲಾಗುವುದಿಲ್ಲ ತಾನೆ?

ಕೇಶಾವಾಕ್ಯಮಿದಂ ಸರ್ವಂ   ಲೇಖಕ : ಶೀನೂ

ಇತ್ತೀಚೆಗೆ ನನಗೆ ಅದೇಕೋ ಯಾವಾಗಲೂ ಹೊಟ್ಟೆಯಲ್ಲಿ ಒಂದು ತರಹ ತಳಮಳವಾಗುತ್ತಿರುತ್ತದೆ. ವಕ್, ವಕ್ ಎಂದು ವಾಕರಿಸುವಂತಾಗುತ್ತದೆ. ಆಗಾಗ ವಾಂತಿಕೂಡ ಆಗುತ್ತಿದೆ. ಗಂಟಲಿನಲ್ಲಿ ಬಾಯಲ್ಲಿ ಯಾವಾಗಲೂ ಕೂದಲು ಅಡ್ಡಕ್ಕೆ ಸಿಕ್ಕಂತೆ ಭಾಸವಾಗುತ್ತದೆ, ವಾಕ್-ವ್ಯಾಕ್.

ಗೊಂಚಲು ಗೊಂಚಲು ಪೆಂಡಿ ಪೆಂಡಿಯಾಗಿ ಕೂದಲು ಕಪ್ಪು ಬಿಳುಪು ಕಂದು ಕೆಂಚು-ಕೂದಲು. ಉದ್ದ ಗಿಡ್ಡ ದಪ್ಪ ತೆಳವು ಕೂದಲು. ಎಣ್ಣೆ ಕಂಡ ಕಾಣದ ಕೂದಲು. ವ್ಯಾಕ್ ವ್ಯಾಕ್. ಸುಮಾರು ಒಂದು ತಿಂಗಳಿನಿಂದ ಹೀಗಾಗುತ್ತಿದೆ. ಇದೇನು ನಿಜವಾದ ರೋಗವೋ ಕಾಲ್ಪನಿಕವೋ ತಿಳಿಯದಾಗಿದೆ. ಅಂತೂ "ಕುಂತಾಗ ನಿಂತಾಗ ಮಕ್ಕೊಂಡಾಗ" ಅಂತಾರಲ್ಲ ಹಾಗೆ ಯಾವಾಗಲೂ ಕೇಶಭೀತಿಯಿಂದ ನರಳುತ್ತಿದ್ದೇನೆ. ಮೂಗಿನಲ್ಲಿ ಶೇವಿಂಗ್ ಸಾಬೂನಿನ ವಾಸನೆ ಬಾಯಲ್ಲಿ ಕಣ್ಣಲ್ಲಿ ಕೂದಲು ವ್ಯಾಕ್-ವ್ಯಾಕ್.

ಪಾಪ ಗುಂಡಮ್ಮ ಅದೆಷ್ಟೋ ಮುತವರ್ಜಿಯಿಂದ ಎಲ್ಲ ತಿಂಡಿ ತಿನಸುಗಳನ್ನು ಕಿಲೀನ ಕಿಲೀನ ಆಗಿ ಕೊಟ್ಟರೂ ಅವರಲ್ಲೆಲ್ಲ ನನಗೆ ಕೂವಲೇ ಕೂದಲು ಈ ರೋಮ ರೋಗದಿಂದ ನನಗೆ ಬುದ್ಧಿ ಭ್ರಮಣೆಯಾಗುವುದೊಂದೇ ಬಾಕಿ. ಡಾಕ್ಟರು ಬಂದು ಎಂದಿನಂತೆ ಮೂರು ಇಂಜೆಕ್ಷನ್ ಚುಚ್ಚಿ-ಮುವತ್ತಾರು ಗುಳಿಗೆ ಕೊಟ್ಟು ನಲ್ವತ್ತೆಂಟು ರೂಪಾಯಿ ಕಿತ್ತುಕೊಂಡು ಹೋದರು. ಸಾಮಾನ್ಯವಾಗಿ ಡಾಕ್ಟರರ ಬಿಲ್ಲನ್ನು ನೋಡುತ್ತಲೂ ಎಲ್ಲಿ ರೋಗಗಳು ವಾಸಿಯಾಗುತ್ತವೆ (ಬದುಕ್ಕಿದ್ದರೆ) ಆದರೆ ಈ ಸಲ ಮತ್ತೆ ವ್ಯಾಕ್ ವ್ಯಾಕ್.

ಈ ವ್ಯಾಕ್ ಭೀತಿಯಿಂದ ಎಲ್ಲೂ ಹೊರಗೆ ಹೋಗಿಲ್ಲ ಎಷ್ಟೋ ದಿನಗಳಿಂದ ಮೊನ್ನೆ ಗೆಳೆಯ ಮೈಸೂರ "ಶಿವೂ" ಬಂದಿದ್ದ. ನನ್ನ ಪರಿಸ್ಥಿತಿಯನ್ನು ಕಂಡು ಮಮ್ಮಲ ಮರುಗಿ ಮೂರು ಪ್ಲೇಟ್ ಉಪ್ಪಿಟ್ಟು ತಿಂದ. ಹೋಗುವಾಗ ಹೇಳಿದ "ನೋಡಮ್ಮ ಶೀನೂ ಒಮ್ಮೊಮ್ಮೆ ಕೊಬ್ಬರಿಯೆಣ್ಣೆ ತಲೆಗೆ ಹಚ್ಚುವುದರಿಂದ ಅದರ ವಾಸನೆಗೆ ಕೂದಲಿನ ಭ್ರಮೆಯಾಗುತ್ತದೆ, ಆದ್ದರಿಂದ ತಲೆಗೆ Coconut oil ಹಾಕಬೇಡ. ಉಷ್ಣಕ್ಕೆ ಬೇಕಾದರೆ ಹರಳೆಣ್ಣೆ ಹಚ್ಚು ತಲೆಗೆ" ಎಂದು ಅಮೂಲ್ಯ ಸಲಹೆ ಮಾಡಿಹೋದ. ಸರಿ ನಾನು "ಗಾಂಧಿ" ಯಾಗಿ ಎಷ್ಟೋ ದಿನಗಳಾಗಿದ್ದರೂ ಕೇಳದೆ ಗುಂಡಮ್ಮ ನನ್ನ ಅಳಿದುಳಿದ ತಲೆಗೆ ಹರಳೆಣ್ಣೆ ತಿಕ್ಕಿ ತೀಡಿದಳು. ಕೇಳಬೇಕೆ? ವಾಂತಿಯ ಜೊತೆಗೆ ಇನ್ನೊಂದು ಶುರುವಾಯಿತು.

ಕಳೆದವಾರ ನನ್ನ ಹಳೆಯ ಗೆಳೆಯ ಹುಬ್ಬಳ್ಳಿಯಾಂವಾ ಶೆಟ್ಟರ ಸಂಗನ ವಿಸೂ ಬಂದಿದ್ದ. ನನ್ನ ಹಾಲತ್ತಿಗೆ ಕನಿಕರಿಸಿ ಕೇಳಿದ

"ಹೊಟ್ಟೆಗೇನು ತಿಂತೀ?"

"ಯಾಕಲೇ ಮಂಗ್ಯಾನ ಮಗನ" ಎಂದೆ.

"ಹಾಂಗಲ್ಲಲೇ ಅಂದರ ಕಾಯಿಪಲ್ಲೇದಾಗ ಉದ್ದುದನ್ನೂ ತಿನಬ್ಯಾಡ. ಪಡುವಲಕಾಯಿ, ನುಗ್ಗಿಕಾಯಿ, ಚವಳೀಕಾಯಿ, ಬೆಂಡೀಕಾಯಿ ಹಿಂತಾವೆಲ್ಲ ಬ್ಯಾಡ. ಮತ್ತ ನಿನ್ನ ಹೇಣ್ತಿಗೆ "ಶಾವಿಗೆ" ಮಾಡಬ್ಯಾಡಂತ ಹೇಳು " ಎಂದು ಹೇಳಿಹೋದ. ನನಗೆ ಯಾವದೇ ಕಾಯಿಪಲ್ಯ ಎಂದಿನಿಂದಲೂ ರುಚಿಸುವುದಿಲ್ಲ. ಇನ್ನು ಗುಂಡಮ್ಮ ಆಗೀಗ "ಶಾವಿಗೆ" ಮಾಡಿದರೂ ಅದು ಆಕಾರದಲ್ಲಿಯೂ ರುಚಿಯಲ್ಲಿಯೂ ಚಕ್ಕುಲಿ ಕೋಡಬಳೆಯಂತೆಯೇ ಇರುವುದರಿಂದ ನನ್ನ ರೋಮರೋಗಕ್ಕೂ ತಿಂಡಿ ತೀರ್ಥಕ್ಕೂ ಸಂಬಂಧವಿಲ್ಲವೆಂದುಕೊಂಡೆ.

ಗುಂಡಮ್ಮನಿಗೆ ಅಕ್ಕ ಪಕ್ಕದ ಮಹಿಳಾ ಮಣಿಗಳಿಂದ ಸಲಹೆ ಸೂಚನೆಗಳು ಬಂದೇ ಬರುತ್ತಿವೆ. ಮೂರನೇ ಮನೆಯ ಮಹಾಲಕ್ಷ್ಮಮ್ಮನ ತಮ್ಮನ ಹೆಂಡತಿಯ ಅಣ್ಣನ ಷಡ್ಡಕನಿಗೂ ಇದೇ ತರ ಆಗಿತ್ತಂತೆ. ಅವರು ಯಾವದೋ ಸ್ವಾಮಿಗಳನ್ನು ಕೇಳಿ ಅವರ ಅಪ್ಪಣೆಯಂತೆ ಇಪ್ಪತ್ತೊಂದು ಕುಂಬಳಕಾಯಿ ತುಂಬಿದ ಗೋಣಿಚೀಲ ವನ್ನು ತಲೆಯಮೇಲೆ ಹೊತ್ತುಕೊಂಡು ಬೆಟ್ಟದ ಆಂಜನೇಯನಿಗೆ ಅರವತ್ತು ಪ್ರದಕ್ಷಿಣೆ ಸುತ್ತಿದರೆಂದೂ ಅದರಿಂದ ಅವರ ರೋಗನಾಶಿಯಾಯಿತೆಂದು ತಿಳಿಸಿದರು. ಬೇಕಿದ್ದರೆ ಅದೇ ಕುಂಬಳಕಾಯಿ ತುಂಬಿದ ಚೀಲವನ್ನು ಅರ್ಧಬೆಲೆಗೆ ಕೊಡಿಸುವದಾಗಿಯೂ ಹೇಳಿದರು.

ಅಂತೂ ನನ್ನ ಮಿತ್ರರು ಆಪ್ತೇಷ್ಟರು ಅಕ್ಕ ಪಕ್ಕದವರಿಂದ ನನ್ನ ಮನೆ ತುಂಬಿ ಹೋಯಿತು. ಎಲ್ಲರೂ ನನ್ನನ್ನು ಸರ್ಕಸ್ಸಿನ ಪ್ರಾಣಿಯನ್ನು ನೋಡುವಂತೆ ನೋಡು ವವರೇ. ಗುಂಡಮ್ಮನ ಕೆಲಗೆಳತಿಯರಂತೂ ನನ್ನನ್ನು ನೋಡಿ ಹೋಗುವಾಗ ಮರುಕ ದಿಂದ ಕಣ್ಣಿಗೆ ಸೆರಗುಹಿಡಿದು ಗಂಟಲಿನಿಂದ ಬೆಕ್ಕಿನಂತಹ ಸ್ವರದಲ್ಲಿ "ಪಾಪ ಗುಂಡಮ್ಮ" ಎನ್ನುತ್ತ ಹೋಗುತ್ತಿದ್ದರು. ಇಷ್ಟೆಲ್ಲ ಹಿತೈಷಿಗಳಿಂದ ಎಷ್ಟೇಷ್ಟೋ ಸಲಹೆ ಗಳು, ಸೂಚನೆಗಳು, ಕಳಕಳಿಯ ವಿನಂತಿಗಳು.

"ಬೆಣ್ಣೆ ತಿನ್ನೋದು ಬಿಟ್ಟು ಬಿಡ್ರೀ"

"ನೀರು ಕಾಯಿಸಿ ಕುಡಿಯಿರಿ"

"ಬೂಟು ಬಿಟ್ಟು ಬರಿಗಾಲಿನಿಂದ ನಡೆಯಿರಿ"
"ವಾರಕ್ಕೊಮ್ಮೆ ಶನಿಮಹಾತ್ಮೆ ಓದಿರಿ"
"ಡೆಕ್ಕನ ಹೆರಾಲ್ಡ್ ಬಿಟ್ಟು ಇಂಡಿಯನ್ ಎಕ್ಸ್‌ಪ್ರೆಸ್ ತೊಗೊಳ್ರಿ"
"ಘಾಟಿ ಸುಬ್ರಮ್ಮಣ್ಯಕ್ಕೆ ಹೋಗಿ ಬರ್ರೀ"
"ಸಿಗರೇಟು ಪೂರಾ ವರ್ಜ್ಯ....:"
"ಬಾಚಣಿಗೆಯನ್ನು ಉಪಯೋಗಿಸಬ್ಯಾಡ್ರಿ."
"ಭಜನೀ ಮಾಡ್ರೀ".
"ಡೆಟ್ಟಾಲ್ ಕುಡಿಯಿರಿ".
"ವಿಕ್ಸ್ ವೇಪೋರಬ್ ತಿನ್ನಿರಿ".

ಒಂದೇ ಎರಡೇ ಅನೇಕಾನೇಕ ಸಲಹೆಗಳು ಇವನ್ನೆಲ್ಲ ಪಾಲಿಸಿಯೂ ನಾನು ಬದುಕಿ ಉಳಿದೆ. ಆದರೂ ವ್ಯಾಕ್, ವ್ಯಾಕ್, ನಿಲ್ಲಿ ಅಲ್ಲಿ-ಕೂದಲು ಗೊಂಚಲು ಗೊಂಚಲು ಕೂದಲು. "ಕುಂತಾಗ ನಿಂತಾಗ ಮಕ್ಕೊಂಡಾಗ-ಕೂದಲು''

ನಮ್ಮ ಆಫೀಸಿನ Typist ಮಲೆಯಾಳ ಮನೋರಮೆ ಮೊನ್ನೆ ಮಂತ್ರತಂತ್ರ ಗಳಲ್ಲಿ ಸಿದ್ಧಿಸಿದ ಜಟಾಧಾರಿ ಶಾಸ್ತ್ರಿಗಳನ್ನು ಕರೆದುಕೊಂಡು ಬಂದಿದ್ದಳು. ರೋಮ ರೋಗಕ್ಕೆ ಉಪಾಯ ಮಾಡಲು. ಶಾಸ್ತ್ರಿಗಳು ಕಣ್ಣುಮುಚ್ಚಿ ಬಾಯಿತೆರೆದು "ಒಂದು ಸಂಖ್ಯೆ ಹೇಳಿರಿ'' ಎಂದರು. ಯಾವ ಸಂಖ್ಯೆಯನ್ನು ಹೇಳಬೇಕೆಂದು ತಿಳಿಯದೆ ಎದು ರಿನ ಗೋಡೆ ನೋಡಿದೆ. ಹೇಮಾಮಾಲಿನಿಯ ಕೆಲೆಂಡರು ಸುಪುಷ್ಟ ಹೇಮಾಳೊಡನೆ ಕುಲು ಕುಲು ನಗುತಿತ್ತು. ಅದೇಕೋ ನನಗೆ ಒಮ್ಮೆಲೇ ಇಂಗ್ಲೀಷಿನ ಸಂಖ್ಯೆ-"8''- ಮನಕ್ಕೆ ಬಂದು ಅದನ್ನೆ ಹೇಳಿದೆ. ಶಾಸ್ತ್ರಿಗಳು ಮೇಲೆಕೆಳಗೆ ನೋಡಿ, ಇನ್ನೊಂದು ಸಂಖ್ಯೆಯನ್ನು ಹೇಳಲು ಹೇಳಿದರು. ಹೇಮಾಳ ಚಿತ್ರ ನೋಡಿ ಪಾಪಪ್ರಜ್ಞೆಯಿಂದ ಬಳಲುತ್ತಿದ್ದ ಮನಸ್ಸಿಗೆ ಒಮ್ಮೆಲೇ ಇಂಗ್ಲೀಷಿನ "7'' ರಂತೆ ಬಾಗಿದ ನನ್ನ ಅಜ್ಜಿಯ ನೆನಪಾಗಿ ಅದನ್ನೇ ಹೇಳಿದೆ.

ಶಾಸ್ತ್ರಿಗಳು ಅನೇಕಸಲ 8-7 ಅಂದು ಪುಟಪುಟಿಸಿದರು ಕೊನೆಗೆ ಪ್ರಸನ್ನರಾಗಿ ಗುಂಡಮ್ಮನನ್ನು ಕರೆಸಿ ನಮ್ಮಿಬ್ಬರಿಂದ ನಮಸ್ಕರಿಸಿಕೊಂಡು ಫಲಮಂತ್ರಾಕ್ಷತೆಗಳನ್ನು ಇತ್ತು ನೋಡಿ ನಿಮ್ಮಯಜಮಾನರು ಹೇಳಿದ ಸಂಖ್ಯೆ 8 ಮತ್ತು 7 ಒಟ್ಟಿಗೆ 87 ಆದ್ದ ರಿಂದ ಅವರ ಕೂದಲಿನ ಸಮಸ್ಯೆ ಬೇಗನೇ ಅಂದರೆ 1987 ನೇ ಇಸ್ವಿಯಲ್ಲಿ ಬಗೆಹರಿ ಯುವದೆಂದು ಅಪ್ಪಣೆ ಕೊಡಿಸಿ ಅವಕ್ಕೆ ದೇವೀಪೂಜೆ ಅವಶ್ಯವೆಂದು ತಿಳಿಸಿ ನಮ್ಮಿಂದ ಎಂಭತ್ತೇಳು ರೂಪಾಯಿ ಪಡೆದು ನಿರ್ಗಮಿಸಿದರು. ಮಹಾನುಭಾವರು!

ಶುಭಾಶಯಗಳೊಂದಿಗೆ :-



ಎನ್. ಎಸ್. ಗಿರಿಮಾಜಿ ಅಂಡ್ ಸನ್ಸ್
(ಬೆಂಗಳೂರು)

ನಂ: 46, ಇಂಡಸ್ಟ್ರಿಯಲ್ ಸಬರ್ಬ್,

ಯಶವಂತಪುರ, ಬೆಂಗಳೂರು-560022.

ಈ ಮಧ್ಯ ನನ್ನ ವಾಂತಿಯ ಸಮಸ್ಯೆ ಹಾಗೇಯೇ ಇತ್ತು. "ಕುಂತಾಗ ನಿಂತಾಗ ಮಕ್ಕೊಂಡಾಗ'' ಕೂದಲೋ ಕೂದಲು ವ್ಯಾಕ್ ವ್ಯಾಕ್. ನನ್ನ ಒಂದು ಸಾಮಾನ್ಯ ರೋಗವನ್ನು ಗುಣಪಡಿಸಲಾಗದ ಇಂದಿನ ವೈದ್ಯ ಶಾಸ್ತ್ರವನ್ನೆಲ್ಲ ಹಳಿದೆ, ಇಂದಿನ ರಾಜಕೀಯ ಆರ್ಥಿಕ ಸಾಮಾಜಿಕ ಸ್ಥಿತಿಯ ಬಗೆ ಮನಸ್ಸು ತೀರ ರೊಚ್ಚಿಗೆದ್ದಿತ್ತು ಇಂದಿರಾಗಾಂಧಿಯಿಂದ ಇಬ್ರಾಹಿಮನ ವರೆಗೆ ಎಲ್ಲರನ್ನು ಉದ್ಧರಿಸಿದ್ದಾಯಿತು. ವಾಸಿಯಾಗದ ವಾಂತಿಯೊಂದು ಕಡೆಜನರ ಅತಿ ಉತ್ಸುಕ ಸಲಹೆಗಳು ಬೇರೆ, ಹೀಗಾಗಿ ಮನಸ್ಸು ಹುಚ್ಚೆದ್ದು ಹೋಯಿತು, ಕೋಪದಲ್ಲಿ;

ವಿಧಾನ ಸೌಧದ ಗೋಡೆಗಳನ್ನು ಗುದ್ದಿ ಬಂದೆ.
ದೋಸೆಗೆ ಇಷ್ಟೇಕೆ ತಡವೆಂದು M.T.R.ನಲ್ಲಿ ಕೂಗಾಡಿ ದಬ್ಬಿಸಿಕೊಂಡೆ.
ಪ್ರಜಾವಾಣಿಯನ್ನು ಹರಿದು ಜಗಿದು ಜಗಿದು ತಿಂದೆ.
ಚಿಲ್ಲರೆಗೋಸ್ಕರ B.T.S. ಕಂಡಕ್ಟರೊಡನೆ ಜಗಳಾಡಿ ಸಹಪ್ರಯಾಣಿಕರಿಂದ ತಳ್ಳಿಸಿಕೊಂಡೆ.
ದೇವರಮನೆಯಲ್ಲಿ ಮಧ್ವಾಚಾರ್ಯರ ಪಟಕ್ಕೆ ಅಡ್ಡನಾಮವ ಬಳಿದೆ.
ಬೆಕ್ಕಿನ ಬಾಲ ಜಗ್ಗಿದೆ.
ನಾಯಿಗೆ ಕಲ್ಲೆಸೆದೆ.
ಹಾರಿದೆ-ಜಿಗಿದೆ.

ಬಿದ್ದೆ-ಎದ್ದೆ ಮತ್ತೂ ಮತ್ತೂ "ಕುಂತಾಗ ನಿಂತಾಗ ಮಕ್ಕೊಂಡಾಗ ವ್ಯಾಕ್ ವ್ಯಾಕ್"

* * *

ಹೀಗಿರುತ್ತಿರುವಾಗ, ಒಂದು ದಿನ ಸಂಜೆ ಎಂದಿನಂತೆ ಟೀವಿಯಲ್ಲಿ ರಾಷ್ಟ್ರೀಯ ಕಾರ್ಯಕ್ರಮ ನೋಡುತ್ತಾ ಕುಳಿತಿದ್ದೆ. ಆಗ ಗುಂಡಮ್ಮ ಒಳಗಿನಿಂದ ಬಂದು ಒಮ್ಮೆ ನನ್ನನ್ನೂ ಒಮ್ಮೆ ಟೀವಿಯನ್ನೂ ನೋಡಿದಳು. ಮತ್ತೆ ಮತ್ತೆ ನೋಡಿದಳು ನೋಡಿಯೇ ನೋಡಿದಳು. ಅವಳ ಗಂಟಿಕ್ಕಿದ ಹುಬ್ಬು ಸಡಿಲುಗೊಂಡು ಯಾವದೋ ನಿರ್ಧಾರಕ್ಕೆ ಬಂದಂತೆ ಒಮ್ಮೆಲೇ ಗಟ್ಟಿಯಾಗಿ ಕೂಗಿದಳು.

"ತಿಳೀತು.... ತಿಳೀೀತು.... ತಿಳೀೀತೂ.... ನಿಮ್ಮ ಈ ರೋಮ ರೋಗದ ಕಾರಣ ತಿಳಿಯಿತು. ಅಲ್ರೀ.... ಎರಡು ತಿಂಗಳಿನಿಂದ ದಿನಾ ರಾತ್ರಿ ಈ ದರಿದ್ರದ್ದು ಟೀವಿ ನೋಡತೀರಿ ಅದರ ತುಂಬೆಲ್ಲ ಬರೇ ಪಂಜಾಬ ಸಮಸ್ಯೆ ಯಾವಾಗ ನೋಡಿದರೂ ಗಡ್ಡಬಿಟ್ಟ ಕೂದಲಬಿಟ್ಟ ಶೀಖರss ಶೀಖರು, ಇಷ್ಟಪರಿಯಿಂದ ದಿನಾಲೂ ನಾನಾತರಹದ ಕೂದಲಿನವರನ್ನ ನೋಡಿದ್ರ ವಾಂತಿ ಆಗದೇ ಬಿಟ್ಟೀತೇ....ಬಾಯಲ್ಲಿ

ಕಣ್ಣಲ್ಲಿ ಕೂದಲು ಬಾರದಿದ್ದೀತೆ...." ಎನ್ನುತ್ತಾ ಕೋಪದಿಂದ ಮೂಲೆಯಲ್ಲಿನ ಒನಕೆಯಿಂದ ಟೀವಿಯನ್ನು ಓಬವ್ವೀಕರಿಸಿದಳು.

ಈಗ ಮನೆಯಲ್ಲಿ ಟಿ.ವಿ. ಇಲ್ಲ–ಪಂಜಾಬ, ಇರಿ–ಶಿಖಿಲ್ಲಲ್ಲ ಕೂದಲಲ್ಲಿ ಹಾಗಾಗಿ ವ್ಯಾಕ್ ವ್ಯಾಕ್ ಇಲ್ಲಿ. ನನ್ನ ಆರೋಗ್ಯ ಸುಧಾರಿಸಿದೆ. ಎಂದಿನಂತೆ ಆಟಕ್ಕೆ ಕ್ಲಬ್ಬಿಗೂ ಮಲಗಲಿಕ್ಕೆ ಆಫೀಸ್‌ಗೂ ಹೋಗುತ್ತಿದ್ದೇನೆ.

ಇದೇ ರೀತಿ ಎಲ್ಲರ ಮನೆಯ ಟಿ.ವಿ.ಗಳೂ ಒನಕೆಗಾಹುತಿಯಾದರೆ ಪಂಜಾಬಿ ಸಮಸ್ಯೆ ತಾನೇ ಬಗೆಹರಿದೀ ತಲ್ಲವೇ ?

ಮಂದಾರ

ಧಾರಾವಾಹಿ-8 -ರಮ್ಯ

[ಇದುವರೆಗೆ – ಹ್ಯಾಂಲೆಟ್, ಮಾಕ್‌ಬೆತ್, ಒಥೆಲೋ, ಮಂದಾರ, ವಸಂತ, ರಮಾ ಇವರ ಹಾಣಾಹಣಿ ಸ್ಪರ್ಧೆಯಲ್ಲಿ ಹ್ಯಾಂಲೆಟ್-ಮಂದಾರ ಜೋಡಿ ಬಣವೇ ಕಲ್ ಕಾಲೇಜಿನ, ಯುಗಳ ಗೀತೆಯ ವಿಜಯೀ ಸ್ಪರ್ಧಿಗಳಾಗಿ ಆಯ್ಕೆಯಾಗಿದ್ದಾರೆ ಮಂದಾರನ ಜೊತೆ ಅಂದು ಸಂಜೆ ಸಿನಿಮಾ ನೋಡಲೆಂದು ಹೊರಟಿದ್ದ ಹ್ಯಾಂಲೆಟ್, ಅವಳು ಬೆಂಗಳೂರಿಗೆ ಹೋಗಿದ್ದುದರಿಂದ ನಿರಾಶನಾಗಿ ಮನೆಗೆ ಹಿಂದಿರುಗಿದ್ದಾನೆ]

ಮಂದಾರ, ಆಯ್ಕೆಗೊಂಡೊಡನೆ, ತಾನು ದೇವೇಂದ್ರನ ಸಭೆಯಲ್ಲಿ ಊರ್ವಶಿಯ ಬದಲು ರಾಜಗಾಯಕಿಯಾಗಿ ಆಯ್ಕೆಯಾಗಿರುವೆನೆಂದು ಭಾವಿಸಿ ಹಿರಿ ಹಿರಿ ಹಿಗ್ಗಿದಳು. ಅವಳ ಬಿ. ಪಿ. 200ಕ್ಕೇರಿತು. ಹಾರ್ಟ್ ಅಟ್ಯಾಕ್ ಆಗದಿದ್ದುದೇ ಆಶ್ಚರ್ಯ. "ಶಿವು ಡಿಯರ್, ಸಂಜೆ 4-30ಕ್ಕೆ ಮನೆಗೆ ಬಾ. ಇಂದ್ರಚಾಪ ಸಿನಿ ಪ್ಯಾಲೇಸಿಗೆ ಹೋಗೋಣ. ಸೌಂಡ್‌ಆಫ್ ಮ್ಯೂಸಿಕ್ ನೋಡೋಣ. ಮೈ ಗಾಡ್ ಶಿವು ನೀನೆಲ್ಲಿ ನನ್ನ ಜೋಡಿಯಾಗುವುದಿಲ್ಲವೋ ಎಂದು ಹತಾಶಳಾಗಿದ್ದೆ. ಇನ್ನೊಂದು ಗುಟ್ಟು...."

ಹ್ಯಾಂಲೆಟ್- ಕುತೂಹಲದ ಶಿಖರವನ್ನೇರಿದ್ದ. ಏನದು ಗುಟ್ಟು? ಪ್ರೇಮವೇ ವಿವಾಹವೇ, ಅಥವಾ.... ಮಧುಚಂದ್ರವೇ !

ಕಾಲೇಜ್ ಜವಾನ ವಿಳೂರಪ್ಪ ಅಷ್ಟರಲ್ಲಿ ಪ್ರತ್ಯಕ್ಷನಾಗಿ

"ಮಂದಮ್ಮ, ಪ್ರಿನ್ಸಿಪಾಲ್ ಕರಿತತೆ ಅರ್ಜೆಂಟ್. ಹಿಂಗಿಂದ್ಹಿಂಗೇ ಬಂದ್ಬಿಡು" ಎಂದ. ಹ್ಯಾಲೆಂಟ್ ತನ್ನ ಮುಖ ಇಳಿಬಿಟ್ಟು "ಸೋ ಲಾಂಗ್ ಮಂದಾರ, ನಾಲ್ಕು ವರೆಗೆ ಬಂದಿದ್ದೇನೆ" ಎಂದು ಕ್ಯಾಂಟೀನಿನತ್ತ ಧಾವಿಸಿದ.

ಪ್ರಿನ್ಸಿಪಾಲರ ಕೋಣೆಯಲ್ಲಿ ಪ್ರೊ|| ಶೇಖರ್, ವಾಸು ಬಬ್ಬಯ್ಯರ್ ಕುಳಿತಿದ್ದರು ಮಂದಾರನನ್ನು ನೋಡಿದೊಡನೆ, ಅವರಿಬ್ಬರೂ ಎದ್ದು ಹೊರಕ್ಕೆ ಹೊರಟರು.

"ಬಂದ್ನಿಮ್ಸ, ಹೊರಡುವಿರಂತೆ" ಎಂದರು ಪ್ರಿಸ್ಸಿಪಾಲರು.

ಇಬ್ಬರೂ ಹಾಗೇನಿಂತರು. ಪ್ರಿನ್ಸಿಪಾಲರು ಮಂದಾರನನ್ನು ಕುಳಿತುಕೊಳ್ಳಲು ಹೇಳಿದರು.ಆದರವಳು ನಿಂತೇಇದ್ದು, ತನ್ನನ್ನು ಕರೆಸಿದ್ದಕ್ಕೆ ಕಾರಣವೇನೆಂದು ಕೇಳಿದಳು.

ಪ್ರಿನ್ಸಿಪಾಲರು ಅವಳ ಯಶಸ್ಸಿಗಾಗಿ ಅಭಿನಂದನೆಯನ್ನು ಸಲ್ಲಿಸಿದರು. ಆದರೆ ಅವಳು ನಿಜವಾಗಿಯೂ ಕಾಲೇಜಿನಲ್ಲಿ ಪ್ರತಿನಿಧಿಸುವ ಯೋಗ್ಯತೆಯಿಲ್ಲದವಳೆಂದು ಒರಟಾಗಿ ಹೇಳಿದರು. ಅಧ್ಯಕ್ಷರಾದ ವಾಸು ಬಬ್ಬುರ್ಯ (ಭಾವಗೀತೆಯ ಕವಿಯೂ ಹೌದು) ಅವರು ವಸಂತ, ರಮಾ ಇಬ್ಬರಲ್ಲೊಬ್ಬರೇ ಆಯ್ಕೆಗೆ ಅರ್ಹರೆಂದು ಅಭಿಪ್ರಾಯ ಪಟ್ಟರುತ್ತೆ; ಆದರೆ ಅವರಿಗೆ ಜೋಡಿಇಲ್ಲದ್ದರಿಂದ ಒಲ್ಲದಮನಸ್ಸಿನಿಂದ ಕೈಬಿಟ್ಟರಂತೆ ಎಂದು ಅವಳಿಗೆ ಸುದ್ದಿತಿಳಿಸಿದರು.

'ಏನು ವಾಸು? ಏನಂತೀ?' ಎಂದು ಕೇಳಿದರೂ ವಾಸು 'ರಿಯಲಿ ಸರ್' ನಾನು ಕವಿಯೂಅಲ್ಲ, ಸಂಗಿತಗಾರನು ಅಲ್ಲ. ಆದರೆ ಅವರಿಬ್ಬರ ಗಾಯನWas simply stunning. Absolutely tops. ಆಯ್ಕೆ ಅಸಾಧ್ಯ ಇವರೊ ತುಂಬಾ ಉತ್ತಮವಾಗಾಯಕಿ, ಆದರೆ not even in the same street. ಎಂದ. ಪ್ರಿನ್ಸಿಪಾಲರು 'ಯುಮೀಗೋ ವಾಸು. ಇನ್ನರ್ಧಗಂಟೆಗೆ ನಾನು ಅಲ್ಲಿಗೆಬರುತ್ತೇನೆ ಎಂದರು. ಅವರಿಬ್ಬರೂ ಹೊರಕ್ಕೆ ಹೋದೊಡನೆ, ಅವರು ಮಂದಾರನಿಗೆ ಕುಳಿತುಕೊಳ್ಳಲು ಹೇಳಿದರು. ಇರು ಮುರುಸಾಗಿ ಅವಳು ಒಲ್ಲದಮನಸ್ಸಿನಿಂದ ಕುಳಿತಳು. ಪ್ರಿನ್ಸಿಪಾಲರು ಹೇಳಿದರು.

"ಮಂದಾರ' ಈ ಅವಕಾಶ ನನಗೆ ಸಿಗುವದಿಲ್ಲವೆಂದು ನಾನು ಹತಾಶನಾಗಿದ್ದೆ" ವಿಸ್ಮಯಮುಗ್ಧಳಾದ ಮಂದಾರ, ಏನೋ ಅನುಮಾನದಿಂದ ಅಪ್ರತಿಭಳಾದಳ ಇದೇನು ಈ ಮುದುಕನಿಗೂ ಇಂತಹ ಚಪಲವೇಕೆ ಬಂತು ಎಂದು ಜಿಗುಪ್ಸೆಗೊಂಡಳು ಆದರೆ, ಅವಳಿಗೆ ಒಂದು ವಿಧವಾದ ಖುಷಿಯೂ ಆಯಿತು. ಈ ಕುಂಟನಂತೆ, ನಾಳೆ ತಾನು ಹಿರೋಯಿನ್ ಆಗಲಿರುವ ಚಿತ್ರದ ನಿರ್ಮಾಪಕ ಅಥವಾ ನಿರ್ದೇಶಕನಿಗೆ ತನ್ನಲ್ಲಿ ಆಕರ್ಷಣೆ ಮೂಡಬಹುದು ಎಂದು ಧೈರ್ಯವೂ ಆಯಿತು. ಆದಾಗದಿದ್ದರೆ ಸಂಗೀತ ನಿರ್ದೇಶಕನಾದರೂ ತನ್ನಲ್ಲಿ ಆಶಕ್ತಿಯನ್ನು ತೋರಿಸಿಯಾನು ಎಂಬ ಸಮಾಧಾನ ತಂದುಕೊಂಡಳು.

ಮಂದಾರ ಹೀಗೆ ಕನಸು ಕಾಣುತ್ತಿರುವಾಗ ವೆಂಕಟಪ್ಪನವರು, ತಮ್ಮ ಕುರ್ಚಿಯನ್ನು ಬಿಟ್ಟು ಮಂದಾರನ ಪಕ್ಕಕ್ಕೆ ಬಂದು ನಿಂತರು.

ಮೆಲ್ಲನೆ ಅವಳ ಭುಜದ ಮೇಲೆ ಕೈಯಿಟ್ಟು ಭಾವಪೂರ್ಣವಾದ ಧ್ವನಿಯಿಂದ
"ಮಂದಾರ, ಒಂದು ಮಾತು" ಎಂದರು.
"ಏನು ಸಾರ್?"
"ನೀನು ಒಪ್ಪಲೇ ಬೇಕು"
"ಯಾತಕ್ಕೆ ಎಂದು ಹೇಳಲಿಲ್ಲವಲ್ಲ ಸಾರ್"

"ನನ್ನ ಮಾತನ್ನು ನಡೆಸಿಕೊಡುವೆನೆಂದು ದೇವರಾಣೆಯಿಟ್ಟು ಭಾಷೆಕೊಡು"

"............"

"ಇದು ಅತ್ಯಂತ ಗುಟ್ಟಿನ ವಿಷಯ !"

"ಅದೇನು ಸಾರ್ ?"

"ಮಾತುಕೊಟ್ಟರೆ ಹೇಳುವೆ"

"ಕೊಡದಿದ್ದರೆ... ....?"

"ನಾನು ಆಕ್ವೆಡಕ್ಟ್ ಬಳಿ ನಿನ್ನ ಮಾತು ಕೇಳಿದ್ದು ನೆನಪಿನಲ್ಲಿದೆ ತಾನೇ?"

"ಹಾಗಲ್ಲ ಸಾರ್, ನೀವು ಏನು ಹೇಳಿದರೂ ಆಗಲಿ ಎನ್ನುತ್ತೇನೆ. ಆದರೆ ನೀವು ಏಕೆ ಇಷ್ಟು ಸುತ್ತು ಬಳಸು ಮಾಡ್ತಾ ಇದೀರೋ ತಿಳೀಲಿಲ್ಲ.'

ಪ್ರಿನ್ಸಿಪಾಲರು ಅವಳ ಭುಜದ ಮೇಲಿನ ಕೈ ತೆಗೆದು, ಅವಳ ಬಲಗೈಯನ್ನು ತಮ್ಮ ಬಲಗೈಯಿಂದ ಹಿಡಿದು ಹೇಳಿದರು.

"ಇದು ಜೀವನದ ಪ್ರಶ್ನೆ. ಒಮ್ಮೆ ಹುಳಿ ಹಿಂಡಿದ ಹಾಲು ಮೊಸರೂ ಆಗೊದಿಲ್ಲ. ಇದ್ದರಿಂದ ನಿನ್ನ ಭಾಷೆಯನ್ನು ಬಲವಂತದಿಂವ ಬಯಸುತ್ತೇನೆ.''

'ಒಪ್ಪಿದೆ ಸಾರ್. ನೀವು ಹೇಳಿದ್ದನ್ನು ನಡೆಸುತ್ತೇನೆ.'

ಪ್ರಿನ್ಸಿಪಾಲರು ಅವಳ ಕೈಬಿಟ್ಟು ತಮ್ಮ ಸೀಟಿಗೆ ಹೋಗಿ ಕುಳಿತು ಹೇಳಿದರು.

"ನನಗೇನೂ ಇದರ ಸಂಬಂಧವಿಲ್ಲ. ನೀನು ಏನಾದರೂ, ಏನು ಬಿಟ್ಟರೂ ಮಾಡಿದರೂ ನನಗೇನಂತೆ. ಆದರೆ ಹ್ಯಾಂಲೆಟ್ ಶಿವು ಇದಾನಲ್ಲ, ಅವನು ಮುಗ್ಧ, ಸಿಂಪಲ್ಟನ್, ಅವನು ನಿನ್ನ ಲವ್ ಮಾಡ್ತಾ ಇದಾನೆ. ಅವನನ್ನು ಬಿಟ್ಟುಬಿಡು. ಇನ್ಯಾರ ಮೇಲೆ ಬೇಕಿದ್ದರೂ ನಿನ್ನ ಜಾಲ ಹರಡು. ಇನ್ನೊಂದು ಮಾತು. ನಿನ್ನ ಹಿತಕ್ಕಾಗಿ ಹೇಳುತ್ತಿದ್ದೇನೆ. ನೀನು ಆ್ಯಕ್ಟ್ರೆಸ್ ಆಗಲಾರೆ. ಸಿಂಗರ್ ಆದರೂ ಸೆಕೆಂಡ್‌ಕ್ಲಾಸ್. ಆದ್ದರಿಂದ ಆಪಂಬಲ ಬಿಟ್ಟು, ಬೇರೆ ಏನಾದರೂ ಮಾಡು........ And, ಗೆಟೌಟ್''

ಮಂದಾರ ಬೆಪ್ಪಾಗಿ ಹೊರಬಿದ್ದಳು. ಅವಳ ಹೃದಯ ಹ್ಯಾಂಲೆಟ್‌ಗೆ ಮೀಸಲಾಗಿತ್ತು. ಆದರೆ.... ಸಿನಿಮಾ ಆಕರ್ಷಣೆ ಅದಕ್ಕಿಂತ ಪ್ರಖರವಾಗಿತ್ತು. ಇದುವರೆಗೆ ಅವಳಿಗೆ ಅದು ತಿಳಿದಿರಲಿಲ್ಲ. ಅದರೆ ಈ ಮುದುಕ ಅವಳ ಮನಸ್ಸಿಗೆ ಅತ್ಯಂತ ದುರ್ಬಲ ಸ್ಥಾನದಲ್ಲಿ ಪೆಟ್ಟು ಕೊಟ್ಟಿದ್ದ.

ಆತ ಬಂದ ರೀತಿ, ಅವನ ಮುಖ ಭಾವ, ಅವನು ಭುಜದಮೇಲೆ ಕೈಯಿಟ್ಟ ರೀತಿ, ಧ್ವನಿಯ ಏರಿಳಿತ ಅವನ್ನೆಲ್ಲಾ ಗಮನಿಸಿದರೆ "ಐ ಲವ್ ಯು" ಎಂದೆಲ್ಲಿ ಹೇಳು ತ್ತಾನೋ ಎಂದು ಬೆದರಿದ್ದಳು. ಆದರೆ ಸದ್ಯ, ಅದು ತಪ್ಪಿತ್ತು.

ಹ್ಯಾಂಲೆಟ್ ತನ್ನ ಜೀವನ ಸಂಗಾತಿಯೆಂದು ಅವಳು ಗುರುತಿಸಿ ಎಷ್ಟೋ ದಿನ ಗಳು, ದಿನಗಳೇಕೆ ವರ್ಷಗಳಾಗಿದ್ದವು. ಅವನ ಸುಂದ ರ ದೇಹ, ಮಧುರ ಧ್ವನಿ, ಮಾತಿನ ಗತ್ತು, ಬುದ್ಧಿವಂತಿಕೆ, ವಿನಯ, ಮುಗ್ಧ ಸ್ವಭಾವಗಳು ಅವಳ ಹೃದಯ ವನ್ನು ಸೂರೆಗೊಂಡಿದ್ದವು.

ತನಗೆ ಸಿನಿಮಾದಲ್ಲಿ ಹೀರೋಯಿನ್ ಛಾನ್ಸ್ ಸಿಕ್ಕು ಎಸ್ಟ್ಯಾಬ್ಲಿಷ್ ಆದಮೇಲೆ ಅವನನ್ನೆ ಹೀರೋ ಆಗಿ ಆಯ್ಕೆ ಮಾಡಿಸಬೇಕೆಂದು ಅವಳು ಧೃಡ ಸಂಕಲ್ಪ ಮಾಡಿ ದ್ದಳು. ಅದಕ್ಕಾಗಿ ಅವಳು ಮೊದಲು ಹೀರೋಯಿನ್ ಅಥವಾ ಸೆಕೆಂಡ್ ಹೀರೋ ಯಿನ್ ಅಥವಾ ಹಿನ್ನೆಲೆಯ ಗಾಯಕಿ ಆಗಬೇಕೆಂದೇ ನಿರ್ಧರಿಸಿದ್ದಳು.

ಹೌದು ! ಹ್ಯಾಂಲೆಟ್ ಜೊತೆಗಿಲ್ಲದ ಬಾಳು ಬರಡು. ಅವನ ಮೇಲಿನ ಪ್ರೇಮ ಮಾಸುವುದೇ ಸಾಧ್ಯವಿಲ್ಲ. ಆದರೀ ಮುದುಕ ತನ್ನಿಂದ ಈಗ ಭಾಷೆ ತೆಗೆದು ಕೊಂಡಿದ್ದಾನೆ !

ಮಂದಾರ, ಭಾರವಾದ ಹೆಜ್ಜೆಗಳನ್ನೆಳೆಯುತ್ತಾ ಮನೆಯ ಕಡೆಗೆ ಹಿಂದಿರುಗಿ ದಳು. ಇಂದ್ರಚಾಪ ಸಿನಿಪ್ಯಾಲೇಸಿನ ಪಕ್ಕದ ಗಲ್ಲಿಯಲ್ಲಿ ಅವಳು ಎಡಕ್ಕೆ ತಿರುಗಿದೊ ಡನೆ, ಅಲ್ಲಿ ನಿಂತಿದ್ದ ಕಾರು "ಹಲೋ, ಮಂದಾರ" ಎಂದಿತು. ಕಾರುಗಳು ಮಾತಾ ಡುವುದಿಲ್ಲವೆಂದು ಅವಳಿಗೂ ಗೊತ್ತು, ಆದರೆ ಈ ಕಾರು ತನ್ನನ್ನು ಕರೆಯುತ್ತಿದೆ.

"ಕಮಿನ್ ಪ್ಲೀಸ್ !"

ಮ್ಯಾಕ್‌ಬೆತ್ತನ ಧ್ವನಿ ! ಕಾರಿನ ಬಾಗಿಲು ತೆರೆಯಿತು. ಮಂದಾರ ಯಾಂತ್ರಿ ಕವಾಗಿ ಅದರೊಳಕ್ಕೆ ಹೋಗಿ ಕುಳಿತಳು.

"ಒಳ್ಳೆಯದೇ ಆಯಿತು. ಅಂತೂ ನೀನು ಸೆಲೆಕ್ಟ್ ಆಗಿಬಿಟ್ಟೆ. ಯೂನಿವ ರ್ಸಿಟಿ ಲೆವೆಲ್‌ನಲ್ಲೂ ನೀನು ಗೆಲ್ಲುತ್ತೀ. ಈ ವಿಷಯವನ್ನು ಡೈರೆಕ್ಟರಿಗೆ ಹೇಳಿದ್ದೇನೆ ಸಿಂಪ್ಲಿ ವಂಡರ್‌ಫುಲ್ ಕತೆ. ಚಂದ್ರಹಾಸ್, ಹೀರೋ, ಬಪ್ಪಿಲಾಹಿರಿ ಮ್ಯೂಸಿಕ್ ಡೈರೆಕ್ಟರು, ಈಗಾಗಲೇ ಹಂಚಿಕೆದಾರರು ತಾಮುಂದು ನಾಮುಂದು ಎಂದು ಬರು ತ್ತಿದ್ದಾರೆ. ನಿನ್ನ ಫೋಟೋ ನೋಡಿ ಡೈರೆಕ್ಟರು ತಕ್ಷಣ ಒಪ್ಪಿಬಿಟ್ಟ. ಅದರಲ್ಲಿ ಒಂದು ಬೇದಿಂಗ್ ಸೀನ್ ಇದೆ. ಕೂರ್ಕಲಂ ಜಲಪಾತದಲ್ಲಿ ಲೊಕೇಷನ್ ಷೂಟಿಂಗ್ ಈ ಸಂಜೆ ನೀನು ಬೆಂಗಳೂರಿಗೆಬರಬೇಕು."

ಮಂದಾರ ಏನೂ ಉತ್ತರಕೊಡಲಿಲ್ಲ. 'Sound of Music' ನೋಡುವ ಛಾನ್ಸ್ ಹೋಯಿತು. ಅದೂ ಹ್ಯಾಂಲೆಟ್ ಜೊತೆಯಲ್ಲಿ! ಬಹುಶ: ರಿಸರ್ವ್ ಮಾಡಿಸಿರುತ್ತಾನೆ ಸೀಟನ್ನು. ಬಣವೇಕಲ್ಲಿಗೆ ಇಂಗ್ಲೀಷ್ ಪಿಕ್ಚರ್ ಬರುವುದೇ ಕರೀಸೋಮವಾರಕ್ಕೆ ಒಮ್ಮೆ. ಮೂರುವರ್ಷಗಳಹಿಂದೆ 'ಗಾನ್‌ವಿತ್‌ದಿ ವಿಂಡ್' ಬಂದಾಗ ಅದುಸಡೆದದ್ದು ಒಂದೇ ಷೋ, ಎರಡನೇ ಷೋಗೆ ಎಂಟೇಜನ ಬಂದು ಇಪ್ಪತ್ತು ನಿಮಿಷಗಳೊಳಗಾಗಿ ಎದ್ದುಹೋಗಿದ್ದರು. ಮಾರುದಿನ 'ಶಂಕರ್-ಗುರು' ಬಂದಾಗ ದೊಂಬಿಯನ್ನಡಗಿಸಲು ಲಾಠಿ ಛಾರ್ಜ್! ಬಣವೇಕಲ್ಲಿನ ಜನರ ದಡ್ಡತನಗಳು ಸಾವಿರ ಇರಬಹುದು, ಆದರೆ ಅವರು ಪರಭಾಷಾಚಿತ್ರಗಳಿಗೆ ಎಂದೂ ಪ್ರೋತ್ಸಾಹ ಕೊಡುವವರಲ್ಲ.

ಇತ್ತ ಹ್ಯಾಲೆಂಟ್ಟಿನ ಸಹವಾಸದ ಎಳೆತ. ಅತ್ತ ಸಿನಿ-ಸೆಳೆತ. ಇತ್ತ ಮಸಾಲೆ ದೋಸೆ-ಅತ್ತ ಈರುಳ್ಳಿ ದೋಸೆ!

'ಯಾಕೆ ಸುಮ್ಮನಿದ್ದೀ ಮಂದಾರ? ನನಗೆ ಈಸಂಜೆ ಒಂದು ಎಂಗೇಜ್ಮೆಂಟ್ ಇದೆ.' 'ಅದೆ ತಪ್ಪಿ ಹೋಗಬೇಕು. ಇದು ಒಂದು ಜೀವಮಾನವಲ್ಲಿ ಅರ್ಧಭಾರಿ ಬರುವ ಛಾನ್ಸ್. ನಿಮ್ಮ ತಂದೆಗೆ ಹೇಳಿದ್ದೇನೆ ಅವರು ಬಹಳ ಸಂತೋಷಪಟ್ಟರು. ನೀನೇ ನಮ್ಮ ಆಪ್ತ, ಹಿತೈಷಿ ಎಂದೆಲ್ಲಾ ಹೊಗಳಿವರು. ಈಗ ನಿಮ್ಮ ಮನೆಗೆ ಹೋಗೋಣ. ಅರ್ಧಗಂಟೆ ಟೈಂನಲ್ಲಿ ರೆಡಿಆಗಿ ಬರಬೇಕು.''

ಕಿಂಗ್ ಲಿಯರ್ ಮಗಳ ವಿಜಯದಿಂದ ತನ್ನ ಮನೋರಥ ಪೂರ್ತಿಯಾದಂತೆ ಹಗಲುಗನಸು ಕಂಡ ಕೆಲವರ್ಷಗಳ ನಂತರ ಡೈರೆಕ್ಟರುಗಳು ನಿರ್ಮಾಪಕರು ತನ್ನ ಮುಂದೆ ಕ್ಯೂನಲ್ಲಿ ನಿಂತಿರುತ್ತಾರೆ. ಹೀರೋಗಳು, ಮಂದಾರನೇ ತಮ್ಮ ಜೋಡಿಯಾಗಬೇಕೆಂದು ಬಯಸಿ ತನ್ನ ಕಾಲು ಹಿಡಿಯುತ್ತಾರೆ.

"ಯಾರಿವರು ?" ಎಂದು ಯಾರಾದರೂ ಕೇಳಿದರೆ "ಡ್ಯಾಂ ಫೂಲ್ ಎಚ್ಚರ! ಹಲ್ಲು ಹಿಡಿದು ಮಾತಾಡು ಮುಕ್ಕೋಟಿ ಕನ್ನಡಿಗರ ಕನಸಿನ ಕನ್ಯೆ ಯಾರು ? ಅವಳ ಹೆಸರು ತಿಳಿಯದವರಾರು ? ಆ ಮಂದಾರನ ಡ್ಯಾಡಿ ಇದು'' ಎಂದು ಸುತ್ತಲಿದ್ದವರು ಗದ್ದರಿಸುತ್ತಾರೆ.

ಕಿಂಗ್ ಲಿಯರನ ಒತ್ತಾಯದಿಂದ ಮಂದಾರ ಹೊರಡಲೇ ಬೇಕಾಯಿತು. ಬೆಂಗಳೂರಿಗೆ ಮಂದಾರ ತಲುಪಿದಾಗ ರಾತ್ರಿ ಎಂಟೂವರೆ ಪ್ರಡ್ಯೂಸರ ಮನೆಗೆ ಹೋದಾಗ ಒಂಬತ್ತು. ಪ್ರಡ್ಯೂಸರ್ ಊರಲ್ಲಿರಲಿಲ್ಲ. ಡೈರೆಕ್ಟರು ಇಳಿದುಕೊಂಡ ಹೋಟೆಲು ತಲುಪಿದಾಗ ರಾತ್ರಿ ಹತ್ತೂಕಾಲು. ಅವನು ಆ ಸಂಜೆಯೇ ಲೊಕೇಷನ್ ಷೂಟಿಂಗಿಗಾಗಿ ಕಲ್ಲೀಕೋಟೆಗೆ ಹೋಗಿದ್ದ. ಆಗ ಮಂದಾರನಿಗೆ ಬಂದದ್ದು ಸಿಟ್ಟೋ ನಿರಾಶೆಯೋ ಹೇಳಲು ಸಾಧ್ಯವಿಲ್ಲ.

"ಶಿವು, ಏನಿದು ನಾನ್ಸೆನ್ಸ್ ? ನನ್ನ ಕೆಲಸ ಕೆಡಿಸಿ ವೃಥಾ ಅಲೆಸಿದೆ. ಹೀಗೇ ಏನು ನೀನು ಇಪ್ಪತ್ತು ಲಕ್ಷ ಇನ್ವೆಸ್ಟ್ ಮಾಡುವುದು. ತೆಪ್ಪಗೆ ಬಣವೇಕಲ್ಲಿಗೆ ಕಾರ್ ಬಿಡು. ನನ್ನ ಜೊತೆ ಒಂದು ಮಾತನ್ನೂ ಆಡಬೇಡ" ಎಂದವಳು ಗುಡುಗಿದಳು.

ಮ್ಯಾಕ್ಬೆತ್ ಸುಸ್ತುಹೊಡೆದ. ಪ್ರೊಡ್ಯೂಸರ್ ಆ ದಿವಸವೇ ಫೋನ್ ಮಾಡಿ ಡೈರೆಕ್ಟರ ಜೊತೆ ಭೇಟಿ ನಿಗದಿಪಡಿಸಿದ್ದ. ತಾನು ಇಪ್ಪತ್ತು ಲಕ್ಷ ಇನ್ವೆಸ್ಟ್ ಮಾಡಲು ಸಿದ್ಧನಿದ್ದ. ಆದರೆ ಮಂದಾರ ಹೀಗೆ ಮಾತನಾಡುವಳೆಂದು ಅವನು ಭಾವಿಸಿರಲಿಲ್ಲ. ಅವಳಿಗೆ ಅವನು ಸಮಾಧಾನ ಹೇಳಿದ.

ಸಿನಿಮಾರಂಗದಲ್ಲಿ ಇವೆಲ್ಲಾ ಮಾಮೂಲಿ, ಹೊಸಬರಿಗೆ ಛಾನ್ಸ್ ಕೊಂಡುಕೊಳ್ಳುವುದೂ ಆಗದ ಮಾತು. ಹಂಚಿಕೆದಾರರು ನವನಟಿಯರ ಚಿತ್ರಗಳಿಗೆ ಗಿರಾಕಿಗಳಾಗುವುದೇ ಇಲ್ಲ. ಅಲ್ಲದೆ ಆ ಡೈರೆಕ್ಟರ್ ಕನ್ನಡದಲ್ಲಿ ಅತ್ಯಂತ busy ಆಸಾಮಿ ಇದೆಲ್ಲವನ್ನೂ ಗಮನಿಸದೆ ಸಿಟ್ಟಾದರೆ ಛಾನ್ಸ್ ಸಿಗುವುದಿಲ್ಲ. ಈ ಸರಳ ವಿಷಯಗಳನ್ನು ಅವನು ವಿವರಿಸಿದ.

ಮಂದಾರ ಅವನ ಸಬೂಬು ಕೇಳಲು ಸಿದ್ಧಳಿರಲಿಲ್ಲ. ಅವಳು ಟ್ರೈಮಾಡಲು ಸಿದ್ಧ. ಆದರೆ ಅದಕ್ಕೆ ಕಾಲ, ದೇಶ, ಸಿದ್ಧತೆ ಏನೂ ಬೇಡವೇ? ನಿಂತ ನಿಲುವಿನಲ್ಲಿ ಸುಳ್ಳು ಹೇಳಿ ಏಕೆ ಅವಳನ್ನು ಎಬ್ಬಿ ತರಬೇಕು ಎಂಬುದೇ ಅವಳ ಸವಾಲು.

ಹೋಟೆಲ್ ಅಶೋಕದಲ್ಲಿ ಇಳಿದುಕೊಳ್ಳುವ ಸಲಹೆಯನ್ನವಳು ತಿರಸ್ಕರಿಸಿದಳು ಉಧೋ ಲಕ್ಷ್ಮಣಾ ಎಂದು ಕಾರು ಬಂದ ದಾರಿಗೆ ಸುಂಕವಿಲ್ಲದೇ ಹಿಂದಿರುಗಿತು.

* * *

ರಾತ್ರಿ ಬಹಳಹೊತ್ತು ನಿದ್ದೆ ಬಾರದಿದ್ದುದರಿಂದ, ರಾಜೀವ, ಬಣವೇಕಲ್ಲಿನ ಬೀದಿಗಳಲ್ಲಿ ಅಲೆಯುತ್ತಾ ಆಕಸ್ಮಿಕವಾಗಿ ಮಂದಾರನ ಮನೆಯ ಮುಂದೆ ಬಂದ. ಮಂದಾರನ ಮನೆಯ ಮುಂದೆ ಪಾರ್ಥೇನಿಯಂ ಬೆಳೆದ ಒಂದು ಹಾಳು ನಿವೇಶನವಿದೆ ಅದರಾಚೆಗೆ ಮುನಿಸಿಪಾಲಿಟಿಯ ಒಂದು ಮಿನಿ ಪಾರ್ಕ್ ಇದೆ ಪಾರ್ಕಿನ ಸುತ್ತಲೂ ಇರುವ ಕುಳ್ಳಾದ ಕಲ್ಲು ಕಟ್ಟೆಯ ಮೇಲೆ ಯಾರೋ ಕುಳಿತಿದ್ದರು. ಅದು ಹ್ಯಾಂಲೆಟ್ ಇರಬೇಕೆಂದು ಊಹಿಸಿದ ರಾಜೀವ ಮೂರುಬಾರಿ ಚಪ್ಪಾಳೆ ತಟ್ಟಿ ಮೂರು ಲೊಟಿಗೆ ಹೊಡೆದ. ಆಚೆಯಿಂದಲೂ ಅವೇ ಸದ್ದುಗಳು ಬಂದವು, ರಾಜೀವ ಒಂದು ಚಿಕ್ಕ ಸಿಳ್ಳೆ ಹೊಡೆದ, ಕಟ್ಟೆಯ ಮೇಲೆ ಕುಳಿತ ಹ್ಯಾಂಲೆಟ್ ಎದ್ದು ರಾಜೀವನ ಬಳಿಗೆ ಬಂದ.

"ಏನೋ....ಮಗನೇ, ಏನುಮಾಡ್ತಾ ಇದ್ದೆ ಇಲ್ಲಿ?" ಎಂದು ಕೇಳಿದ ರಾಜೀವ.

ಹ್ಯಾಂಲೆಟ್ "........ಮಗನೇ, ತೆಪ್ಪಗೆ ಬಾಯಿ ಮುಚ್ಚಿಕೋ, ಯಾವಾಗ ಎಲ್ಲಿ ಏನು ಹೇಳಬೇಕು ಅನ್ನೋದೇ ನಿನಗೆ ಗೊತ್ತಿಲ್ಲ" ಎಂದ.

"ಓಹೋ ಇದು ಪ್ರೇಮಕಾಯಿಲೆ. ಇಲ್ಲದ ಹುಡುಗಿ ನೋಡಿಕೊಂಡು ಕುಳಿತಿರುವ ಬದಲು ಸಿನಿಮಾಕ್ಕಾದರೂ ಹೋಗಿದ್ದರೆ, ಬೆಚ್ಚಗಿರಬಹುದಾಗಿತ್ತು. ಲೋ ಶಿವು ಒಂದು ಮಾತು ಹೇಳಿದ್ರೆ ಕೇಳ್ತಿಯಾ"

"ಏನು ಕಿವಿಗೆ ಹತ್ತಿ ಇಟ್ಟುಕೊಳ್ಳೋಕಾಗುತ್ತೇ ?"

"ಇದು ನಿನಗೆ ತರವಲ್ಲ. ಅವಳ ಐಲು ಬಿಟ್ಟುಬಿಡು ಚೆನ್ನಾಗಿ ಓದಿ, ಗಾಂಧೀ ಕ್ಲಾಸಿನಲ್ಲಾದರೂ ಪಾಸಾಗು. ಅವಳನ್ನು ನಿಭಾಯಿಸೋಕೆ ನಿನ್ನ ಕೈಲಾಗೋದಿಲ್ಲ."

"ಮುಚ್ಕೋ ಬಾಯಿ. ಅವಳನ್ನ ಇನ್ನೊಂದು ಬಾರಿ ಏನಾದರೂ ಅಂದ್ರೆ ಒದೆ ಬಿದ್ದಾವು."

"ಓಹೋ, ಹಾಗೇನು ? ಎಲ್ಲಿವರೆಗೆ ಬೆಳೆದಿದೆ ನಿನ್ನ ಲವ್."

"ರಾಜೀವ, ನಿನ್ನಂಥ ಲೋಫರ್, ಅರೆಹುಚ್ಚನಿಗೆ ಅದನ್ನೆಲ್ಲಾ ಹೇಗೆ ಹೇಳಲಿ? ನಿನಗೆ ಅರ್ಥವಾಗುವುದಿಲ್ಲ."

"ಅದೆಲ್ಲಾ ನಿನ್ನಂಥ ಬೇವಾರ್ಸಿ ಮಕ್ಕಳಿಗೆ ರಿಸರ್ವ್ಡ್ ಅನ್ನು. ಅದೇನು ಕೊಂಚವಾದರೂ ಹೇಳಬಹುದಾದರೆ ಹೇಳು."

"ನನ್ನ ಜೀವನ ನಂದನದ ಅಪ್ಸರೆ ಅವಳು ನನ್ನ ಯುಗಯುಗಗಳ ಕನಸು ಅವಳು. ಹಲವು ಜನ್ಮಗಳ ತಪ: ಫಲ ಅವಳು. ಈ ನನ್ನ ತನು, ಮನ, ಧನಗಳನ್ನು ಅವಳ ಪಾದಕ್ಕೆ ಅರ್ಪಿಸಿದ್ದೇನೆ ನನ್ನ ಪ್ರೇಮಮಂದಿರದ ಆರಾಧ್ಯದೇವತೆ ಅವಳು."....

ರಾಜೀವ ಅವನ ಮಾತಿನ ಲಹರಿಯನ್ನು ತಡೆದ.

"ನಿನ್ನ ಚಂದ್ರಮಂಚದ ಚಕೋರಿ ಅವಳು. ಪ್ರೇಮಕಾಫಿಪುಡಿಯ ಚಿಕೋರಿ ಅವಳು ಅಲ್ಲವೇ!. ಹಾಗಲ್ಲ, ಅವಳು ಹುಣಿಸೆಬೀಜದ ಪುಡಿ. ಹೊಟ್ಟೆಗೆ ಸಂಕಟ, ತಲೆಗೆ ಚಕ್ರ.........

ಅವರಿಬ್ಬರೂ ಕಾದಾಡುತ್ತಾ ಮಂದಾರನ ಮನೆಯ ಬೀದಿಯನ್ನು ದಾಟಿ ಬೀದಿ ದೀಪಗಳ ಅರೆ ಬೆಳಕಿನಲ್ಲಿ ಮಾಯವಾದರು.

ಕಿಂಗ್ ಲಿಯರ್ ಮನೆಯಲ್ಲೇ ಕನಸುಕಾಣುತ್ತಾ ಮಲಗಿದ್ದ ಬೆಳಗಿನಜಾವ ಮೂರುವರೆ ಗಂಟೆಗೆ ಮಂದಾರ ಬಾಗಿಲುತಟ್ಟಿದಳು. ಲಿಯರ್ ಬಾಗಿಲು ತೆರೆದು

"ಏನಾಯಿತು?" ಎಂದು ಕೇಳಿದರು.

"ಈಡಿಯಟ್ಸ್ ಮಾತು ನಂಬಿದರೆ ಏನಾಗುತ್ತದೆಯೋ ಅದು......." ಎಂದು ಮಂದಾರ ತನ್ನ ಕೋಣೆಗೆ ಹೋಗಿ ಹಾಸಿಗೆಯ ಮೇಲೆ ಹೊರಳಿದಳು.

ನಿದ್ದೆ ಮುಗಿಸಿ ಮಂದಾರ ಎದ್ದಾಗ ಎಂಟೂವರೆಗಂಟೆಯಾಗಿತ್ತು. ಹೆಣೆದು ಹೋಗುತ್ತಿದ್ದ ರೆಪ್ಪೆಗಳು, ಮರಳು ಅಂಟಿದಂತಿದ್ದ ನಾಲಗೆ ಸೋತು ಸೊಪ್ಪಾಗಿದ್ದ ಮೈಗಳನ್ನು ಸಂತೈಸುವವೇಳೆಗೆ ಭಗವಾನ್ ಭಾಸ್ಕರನು ಆಗಲೇ ಮೂರು ಮಾರಿಗಿಂತ ಹೆಚ್ಚು ಮೇಲೇರಿದ್ದ. ಕಿಂಗ್‌ಲಿಯರ್, ಕಾಫಿಮಾಡಿಕೊಡು ಬಂದು
'ಮಂದಾ' ನಿದ್ದೆ ಆಯಿತೇ" ಎಂದು ಕೇಳಿದ.

"ಇಲ್ಲ ಅಪ್ಪಾ"

"ಕಾಫಿತಗೋ."

ಕಾಫಿಯನ್ನು ಕುಡಿದ ಮಂದಾರ' ಮುಖತೊಳೆದು ಕೊಂಡು ಬಂದು ಅಡುಗೆ ಮನೆಯನ್ನು ನೋಡಿದಳು, ಅಲ್ಲೊಂದು ವಿಪ್ಲವ ಸಂಭವಿಸಿತ್ತು. ಎಲ್ಲ ಕಪಾಟುಗಳೂ ಬಾಯಿತೆರೆದಿದ್ದವು. ಸ್ಟೋವ್ ಧಗಧಗನೆ ಉರಿಯುತ್ತಿತ್ತು. ಅಡಿಗೆ ಅಟ್ಟಿನಮೇಲೆ, ನೆಲದತುಂಬ ಪಾತ್ರೆಗಳು ವಿವಿಧ ಭಂಗಿಗಳಲ್ಲಿ ಹೊರಳಾಡುತ್ತಿದ್ದವು. ಒಂದುಕಡೆ ಚೆಲ್ಲಿ ದಹಾಲು, ಧೂಳೀಕರಿಸಿದ ಕಾಫಿಪುಡಿ ಇದ್ದರೆ, ಇನ್ನೊಂದುಕಡೆ ಹಿಂದಿನದಿನ ಬೆಳಿಗ್ಗೆ ಮಾಡಿದ್ದ ಸಾರಿನ ಪಾತ್ರೆಯ ಬಾಯಿ ತೆರೆದು ಹಳಸಿದ ವಾಸನೆ ಮೂಗಿಗೆಬಡಿಯುತ್ತಿತ್ತು

ಸಿನಿಮಾ ಹುಚ್ಚಿಗೆ ಬಲಿಯಾದರೆ ಮನೆ ಹೀಗೆ ಅವ್ಯವಸ್ಥೆಯ ತವರಾಗುತ್ತದೆ ಎಂಬ ಆಲೋಚನೆ ಅವಳಿಗೆ ಬಂದಿತು.

"ತಿಂಡಿ ಏನ್ಮಾಡ್ತೀ?" ಕಿಂಗ್‌ಲಿಯರ್ ಕೇಳಿದ

"ಉಪ್ಪಿಟ್ಟು."

"ಥೂ ಅದರ ಸಹವಾಸವೇಬೇಡ. ಇಲ್ಲೇ ಹೋಗಿ ಶ್ರೀರಾಮರೆಸ್ಟೋರೆಂಟಿನಲ್ಲಿ ಎಂಟು ಇಡ್ಲಿ, ಎರಡು ದೋಸೆ ಕಟ್ಟಿಸಿಕೊಂಡುಬರಲೇ?'' ಎಂದು ಕಿಂಗ್‌ಲಿಯರ್ ಕೇಳಿದ.


"ಬೇಗ ಒಂದಿಷ್ಟು ಒಗ್ಗರಣೆಹಾಕಿ, ಕಾಯಿತಂದು ಕೊತ್ತಂಬರಿ ಬೆರಸಿ, ಸೊಗ

ಸಾದ ಉಪ್ಪಿಟ್ಟು ಮಾಡ್ತೀನಿ. ಒಂದು ನಿಮಿಷ ಹೊರಗೆ ಕುಳಿತಿರಿ.'' ಎಂದಳು ಮಂದಾರ.

"ಏನಾಯಿತು. ಬೆಂಗಳೂರಿನಲ್ಲಿ?''

"ಸರೀ ಹೋಯ್ತು ಅಪ್ಪ, ಎಲ್ಲಾ ಬಿಟ್ಟು ಈ ಪ್ರ್ಯಾಕ್ಟೈತ್ ಶಿವು ಮಾತನ್ನ ನಂಬಿ, ನನಗೆ ಸೌಂಡ್ ಆಫ್‌ಮ್ಯೂಸ್ಸಿಕ್ ನೋಡುವ ಛಾನ್ಸ್ ತಪ್ಪಿಸಿದಿರಿ. ರಾತ್ರಿಯೆಲ್ಲಾ ಉಪವಾಸ, ಪ್ರಯಾಸ, ಡೈರಕ್ಟರೂ ಇಲ್ಲ, ಪ್ರಡ್ಯೂಸರೂ ಇಲ್ಲ, ಬರೀ ಬುರುಡೆ. ಹೋಟೆಲ್ ಅಶೋಕದಲ್ಲಿರೋಣ ಎಂದ ಆ ಮಂಕುದಿಣ್ಣೆ, ಏನೂಬೇಡ ಅಂತ ಪಟ್ಟುಹಿಡಿದು ಬಂದೆ.''

"ಮಂದಾ' ಇಂಥಾ ಸಣ್ಣವಿಷಯಕ್ಕೆ ರೇಗಿದರೆ ಹೇಗೆ ನಿನಗೆ ಛಾನ್ಸ್ ಸಿಗಬೇಕಾದರೆ ಕಾಯಬೇಕು ಎಸ್ಟ್ಯಾಬ್ಲಿಷ್ ಆದಮೇಲೆ ಆ ಮಾತುಬೇರೇ ನಾನು ಎ. ವಿ. ಸ್ಕೂಲಿನಲ್ಲಿ ಓದುತ್ತಿದ್ದಾಗ ಒಂದು ಪದ್ಯ ಇಟ್ಟಿದ್ದರು. ಆಗಿನ ಕಾಲದ ಪದ್ಯಗಳೇ ಪದ್ಯಗಳು. ಈಗ ಏನಿದೆ ಮಣ್ಣು? ಗ್ರ್ಯಾಜುಯೇಟಾದರೂ ಓದಲು ಬರೆಯಲು ಬರೋದಿಲ್ಲ. ಆ ಪದ್ಯ ಏನೆಂತ ಇತ್ತು ಗೊತ್ತೇ? If at first you dont succeed try, try, try again ಅಂತಲೋ ಏನೋ ಇತ್ತು. ಬ್ರೂಸ್‌ಲೀ ಅಂತ ಒಬ್ಬ ಸ್ಕಾಟ್ ಲೆಂಡ್ ದೊರೆ ಇದ್ದನಂತೆ ಅವನು ಬರೆದದ್ದು.''



ಅವರೇ ? ಇನ್ನೂ ರಾಜಿನಾಮೆಕೊಡದ ಮಂತ್ರಿಗಳು ಕಣಯ್ಯಾ!

"ಅಪ್ಪ, ಬ್ರೂಸ್‌ಲೀ ಎನ್ನೋನು ಸಿನಿಮಾ ಆ್ಯಕ್ಟರ್, ಕರಾಟೆ ಎಕ್ಸ್‌ಪರ್ಟ್."

"ಯಾರಾದರೂ ಆಗಲಿ, ಏನಾದರೂ ಆಗಲಿ, ಇನ್ನೊಬ್ಬ ಕವಿ ಹೇಳಿದ್ದಾನಲ್ಲ ಎಲ್ಲಾದರು ಇರು ಎಂತಾದರು ಇರು, try try try try ಮಾಡುತಲಿರು ಎಂದು"

ನನಗಂತೂ ಬೋರ್..........."

"ಹಲೋ ಮಂದಾರ, ಯಾವಾಗ ಬಂದೆ?" ಎನ್ನುತ್ತಾ ಪ್ರಭಾ ಒಳಕ್ಕೆ ಬಂದಳು.

ಕಿಂಗ್‌ಲಿಯರನ ಕುತೂಹಲ ತಣಿದಿರಲಿಲ್ಲ ತನ್ನ ಮಗಳು ಹೀಗೆಲ್ಲಾ ಮತ್ತೆ ಮತ್ತೆ ಬ್ರೂಸ್‌ಲೀ ನೋ, ಅಥವಾ ಇನ್ನೊಬ್ಬ ಕವಿಯ ಹಾಗೆ try try try ಅಂತ ಟ್ರೈ ಮಾಡದಿದ್ದರೆ ಅವಳಿಗೆ ಛಾನ್ಸ್ ಸಿಗುವುದಾದರೂ ಹೇಗೆ? ಧ್ಯೇಯಸಾಧನೆಯು ಶ್ರಮ, ತ್ಯಾಗಗಳಿಲ್ಲದಿದ್ದರೆ ಸಾಧ್ಯವಾಗುವುದಾದರೂ ಹೇಗೆ? ಬ್ರೂಸ್‌ಲೀ ಏನು ಪೆನ್ನು ಹಿಡಿದುಕೊಂಡಕೂಡಲೇ ಆ ಪದ್ಯ ಏಕ್‌ದಂ ಬರೆದುಬಿಟ್ಟನೆ!

ಪ್ರಭಾ, ಮಂದಾರ ಇಬ್ಬರೂ ಉಪ್ಪಿಟ್ಟು ಮಾಡಲು ಅಡಿಗೆ ಮನೆಯನ್ನು ಅಣಿಗೊಳಿಸುತ್ತಿದ್ದರು. ಇತ್ತ ಕಿಂಗ್‌ಲಿಯರ್ ಬಳಿಗೆ ಒಥೆಲೋ ಮಹಾಶಯ ಆಗಮಿಸಿದ. ಒಥೆಲೋ ಹಿಂದಿನದಿನದಿಂದಲೂ, ಹಿಂಬದಿಯ ಸಾಲಿನಲ್ಲೇ ಪ್ರೇಕ್ಷಕನಾಗಿ ನೋಡುತ್ತಿದ್ದ. ಅಸಹಾಯಕನಾಗಿ ಹಲ್ಲುಹಲ್ಲು ಕಡಿದುಕೊಂಡು, ತುಟಿಕಚ್ಚಿಕೊಂಡು ತೆಪ್ಪಗಿದ್ದ.

ಇಂದು ಕಿಂಗ್‌ಲಿಯರ್ ಬಳಿಗೆ ಬಂದು ನಮಸ್ಕಾರ ಹೇಳಿದ. ಕಿಂಗ್‌ಲಿಯರ್ ಸಿಗರೇಟಿನ ಹೊಗೆಯನ್ನು ದೀರ್ಘವಾಗಿ ಎಳೆದು, ನಿಧಾನವಾಗಿ ಹೊರಬಿಡುತ್ತಾ,

'ಯಾರೂ ?' ಎಂದು ಕೇಳಿದ.
'ನಾನು ಸಾರ್........'
'ನಾನೂ ಅಂದ್ರೆ ಯಾರೊ?'
'ಶಿವು ಸರ್'
'ಶಿವೂ ಅಂದ್ರೇ....ಎಂಥಾ ಶಿವು?'
'ಓ, ಶಿವು....'
ಓ, ಓ ಶಿವು ಅನ್ನು. ಓ ಅಂದ್ರೇ?'
'ಒಂಟೇ ಹಳ್ಳಿ ಸರ್'
'ಏನು ಬಂದೇ?'

'ನಿಮ್ಮ ಮಗಳಿದ್ದಾರಲ್ಲ ಮಂದಾರ, ಅವರ ಕ್ಲಾಸ್ಮೇಟ್ ಸಾರ್ ನಾನು. ಅವರಿಗೆ

ಕಂಗ್ರ್ಯಾಟ್ಸ್ ಹೇಳಲು ಬಂದೆ. ಸಿಂಪ್ಲೀಡಿವೈನ್ ಸಿಂಗರ್ ಸರ್, ಎಕ್ಸಾಟಿಕಲಿ ಬ್ಯೂಟಿಫುಲ್ ಸರ್....'

'ನೀನು ಹಾಗಂದ್ರೆ ಆಯ್ತೋ? ನಮ್ಮ ಕನ್ನಡ ನಾಡಿನಲ್ಲಿ ವರ್ತ್ರಿಗೆ ಎಲ್ಲಿದೆ ಬೆಲೆ ಒಂದು ಸಿನಿಮಾದಲ್ಲಿ ಹೀರೋಯಿನ್ ಬೇಡ, ಪ್ಲೇ ಬ್ಯಾಕ್ ಸಿಂಗರ್ ಆಗಿ ಕೂಡ ಛಾನ್ಸ್ ಸಿಕ್ಕಿಲ್ಲ. ಕನ್ನಡಾ, ಕನ್ನಡಾ ಅಂತ ಬಡ್ಕೋತಾರೆ ತೆಲುಗರು, ತಮಿಳರು ತುಂಬಿ ತುಳುಕ್ತಾ ಇದ್ದಾರೆ. ನಿನ್ನೆ ಬೆಂಗಳೂರಿಗೆ ಹೋಗಿ ಬಂದಳು. ಇನ್ವೈಟ್ ಮಾಡೋದೇಕೆ, ವೇಟ್ ಮಾಡ್ದೇ ಇರೋದೇಕೆ ! ಮಂದಾರ ಅಟ್ಟರ್ಲಿ ಡಿಸಪಾಯಿಂಟೆಡ್ಡು, ಅದೇ ಇಂಗ್ಲೀಸ್ ಪೋಯೆಟ್ ಇದಾನಲ್ಲ ಬ್ರೂಸ್‌ಲೀ, ಅವನು try try try again ಅನ್ನೋ ಪದ್ಯ........'

"ಯಾತಕ್ಕೆ ಸಾರ್ ಬೆಂಗಳೂರು, ಮುಂದಿನ ತಿಂಗಳು ಮಂದಾರ ಬರ್ತಾರಲ್ಲ ಪೋಲಾಳ್ವ ನಗರಕ್ಕೆ ಸ್ಪರ್ಧೆಗೆ, ಅಲ್ಲಿ ಆನ್ ದಿ ಸ್ಪಾಟ್, ಸ್ಕ್ರೀನ್ ಟೆಸ್ಟ್ ಮಾಡಿಸಿ ಅಲ್ಲಿರೋ ನೀಲಗಿರಿ ಸ್ಟುಡಿಯೋಸ್‌ನಲ್ಲಿ ನಾಲ್ಕು ಸಾಂಗ್ಸ್ ರೆಕಾರ್ಡ್‌ಮಾಡಿಸಿ ಬಿಡ್ತೇನೆ. ಆಮೇಲೆ ಕತೆ ಬರೆಸಿದರಾಯ್ತು. ನಲವತ್ತು ಸಾವಿರ, ಅಡ್ವಾನ್ಸ್ ಕೇಳ್ತಾರೆ. ನಾನೇ ಕೊಡ್ತೀನಿ. ಪಿಕ್ಚರ್ ರಿಲೀಸ್ ಆದದಿನ ನನಗೆ ನನ್ನ ನಲವತ್ತು ಸಾವಿರ ನಿಮ್ಮ ಡಾಟರ್‌ಗೆ ಗಾಯನಕ್ಕೆ ಎಂಟುಸಾವಿರ, ಹಿರೋಯಿನ್ ಪಾರ್ಟಿಗೆ ಹತ್ತು ಸಾವಿರ........Cash down"

'ಮೂಸಿಕ್ ಡೈರೆಕ್ಟರ್ ? ಕವಿ ?'

'ಮ್ಯೂಸಿಕ್, ಇರುದಯ ನಾಯಗಂ; ಕವಿಗಳಿಗೇನು ಸಾರ್ ಐವತ್ತು ಕೊಟ್ಟರೆ ಒಂದು ಪದ್ಯ, ಇಷ್ಟರ ಮೇಲೆ ಒಂದು ಪ್ಯಾಕ್ ಸಿಗರೇಟು. ಯಾರೂ ಇಲ್ಲದಿದ್ದರೆ ನಾನೇ ಬರೆಯುತ್ತೇನೆ.'

'ಹೀಗೇ ಅಂದು ಕೈಕೊಟ್ಟ ಆ ಎಂ. ಶಿವು....'

'ಸಾರ್ ನಾನು ಓ. ಶಿವು, ಪ್ರಾಣ್ ಜಾಯೆ ಪರ್ ವಚನ್ ನಜಾಯೆ...'

'ಅಪ್ಪಾ ಉಪ್ಪಿಟ್ಟು ಕೊಡ್ತೀನಿ ಬಾ' ಎಂದು ಮಂದಾರ ಒಳಗಿನಿಂದ ಕೂಗಿದಳು. ಅಲ್ಲೇ ಇದ್ದ ಒಂದು ಕರಿ ಬೆಕ್ಕು ಸೀನಿತು. ಬಾಗಿಲ ಮುಂದೆ ಮಲಗಿದ್ದ ನಾಯಿ ಎದ್ದು ತಲೆ ಕೊಡವಿ ಓಡಿ ಹೋಯಿತು. ಹಲ್ಲಿ ದಕ್ಷಿಣದಲ್ಲಿ ಲೊಚಗುಟ್ಟಿತು

ಕಿಂಗ್ ಲಿಯರ್ 'ಮಂದಾ, ನಿನ್ನ ಕ್ಲಾಸ್ಮೇಟ್ ಓ, ಶಿವು ಬಂದಿದ್ದಾನೆ. ಎರಡು ಪ್ಲೇಟ್ ಉಪ್ಪಿಟ್ಟು ಇಲ್ಲಿಗೇ ತಾ' ಎಂದ. (ಸಶೇಷ)

ಗುರ್ಸ್ಸಿ ಮತ್ತು ಕಾಲಾಸಿಂಗ್ ಅ. ರಾ. ಸೇ.

ಶ್ವೇತಪತ್ರವೆಂದರೇನು ಎಂಬ ಪ್ರಶ್ನೆ ಈಗ ಎಲ್ಲೆಡೆಯಲ್ಲೂ ಸಾಮಾನ್ಯ. ಮುಗಿಲುಹಳ್ಳಿಯ ಗುರ್ಸ್ಸಿ, (ಕರ್ಣಪಿಶಾಚಿಯ ಸಂಪಾದಕ) ಈ ಪ್ರಶ್ನೆಯನ್ನು ಕೇಳಿದಾಗ ನಾನು ಅಪ್ರತಿಭನಾದೆ. ನಾನು ಹಳ್ಳಿಯ ಗಮಾರ ನಾಗರಿಕತೆಯ ಸಂಪರ್ಕ ನನಗಿರುವುದು ಮುಗಿಲು ಹಳ್ಳಿಯಲ್ಲಿ ಮಾತ್ರ. ಮುಗಿಲುಹಳ್ಳಿಯಲ್ಲಿ ನಾಗರಿಕತೆ ಇದೆಯೋ ಎಂಬ ಪ್ರಶ್ನೆ ಸಂಶೋಧಕರಿಗೂ ಚಳ್ಳೆಹಣ್ಣು ತಿನ್ನಿಸುತ್ತಿದೆ. ಎಂದ ಮೇಲೆ ರಾಜಗಳ, ರಾಷ್ಟ್ರಗಳ ರಾಜಧಾನಿಯಲ್ಲಿ ಆಳರಸರು ಮಾತ್ರವೇ ಹೊರಡಿಸುವ ಶ್ವೇತ ಪತ್ರ ಎಂದರೇನೆಂದು ನನಗೆ ತಿಳಿಯುವುದಾದರೂ ಹೇಗೆ?

ನಾನು 'ಶ್ವೇತಪತ್ರ ಅಂದ್ರೆ ಸಾಹಿತ್ಯದಂತಹ ಒಂದು ಎಂಟಿಟಿ' ಎಂದೆ.

ಕರ್ಣಪಿಶಾಚಿಯಗುರ್ಸ್ಸಿ 'ಸಾಹಿತ್ಯ ಎಂದರೆ ಏನು? ಅದು ಎಂಥಾ ಎಂಟಿಟಿ? ಎಂಟಿಟಿ ಎಂದರೇನು? ಎಂದು ಕೇಳಿದ.

ನಾನು ಕಣ್ಣು ಕಣ್ಣುಬಿಟ್ಟೆ. ಎಂಥೆಂಥದೋಏನೋ ಸಾಹಿತ್ಯ ಎನ್ನಿಸಿಕೊಳ್ಳುತ್ತಿದೆ.

'ಓದುಗನ ಸಹಿತ ಬರಹಗಾರ ಹಂಚಿಕೊಳ್ಳುವ ಅನುಭವ. ಅಥವಾ ಅವರು ಏನನ್ನು ಸಾಹಿತ್ಯ ಎನ್ನುತ್ತಾರೋ ಅದು' ಎಂದೆ ಡೆಸ್ಪರೇಟ್ ಆಗಿ

'ಅವರು ಯಾರು? ಎಂದ ಗುರ್ಸ್ಸಿ.

'ಇದು ಸಾಹಿತ್ಯ, ಇದಲ್ಲ ಅಂತಾರಲ್ಲ ಅವರೇ ಅವರು ಹಾಗೆಯೇ ಹೊರಡಿಸುತ್ತಾರಲ್ಲ ಅವರು ಏನನ್ನು ಶ್ವೇತಪತ್ರ ಅಂತಾರೋ ಅದೇ ಶ್ವೇತಪತ್ರ. you are not to ask why ಗುರ್ಸ್ಸಿ you should count the people who die and ಓದು ಶ್ವೇತಪತ್ರ'.

'ಓದಿದೆನಪ್ಪ, ಸುತ್ರಾಂ ಅರ್ಥಾಗಲಿಲ್ಲ'.

'ನೋಡು, ಶ್ವೇತಪತ್ರ ಎಲ್ಲಾ ವಿಷಯಗಳನ್ನೂ ಸ್ಪಷ್ಟವಾಗಿ ವಿವರಿಸಿದೆ.

'ಹಂಗಾದ್ರೆ ಇದು ಸುಳ್ಳಿನಕಂತೆ ಅಂತಾ ಅಕಾಲಿಗಳು ಯಾಕೆ ಹೇಳಿದ್ರು? ಅವರೇ ಒಂದು ಶ್ವೇತಪತ್ರ ಹೊಂಡಸ್ತರಂತೇ! ವಿರೋಧ ಪಕ್ಷಗಳೂ ಹೊಂಡಸ್ತವೋ ಹೆಂಗೋ? ರಾಯಲೇ, ನಾವೂ ಒಂದು ಹೊಂಡ್ಸಿದರೆ ಹೆಂಗೆ?'

'ಹೊಂಡ್ಸೋ ನನ ಸರ್ಧರ. ಯಾರು ಬ್ಯಾಡ ಅಂದ್ರು ? ಮಸ್ತಕಂದು

ಬಿಳೀ ಹಾಳೆ ಸಿಗ್ತ್ವೆ. ಅವನ್ನೇ ಜೋಡ್ಸಿದರಾತು. ಹಂಗಿದ್ರೂ ವೈಟ್‌ಪೇಪರ್ ಅಂದ್ರೆ ಬಿಳೇಕಾಗ್ದ ಅಂತ'

'ಮತ್ತೆ ಅದ್ರಮ್ಯಾಲೆ ಕರೀಮಸಿ ಅಕ್ಷರ ಇರ್‍ತ್ವಲ್ಲ, ಅದು ಹೆಂಗೆ ವೈಟ್‌ಪೇಪ ರಾಯ್ತು ?'

'ಅದನ್ನೋದಿದ್ರೂ ನಿಂಗೆ ಸುತರಾಂ ಅರ್ಥ ಆಗ್ಲಿಲ್ಲ ಅಂದೆಲ್ಲಾ ಆ ಕರೀಮುಸಿ ಅಕ್ಷರ ಇದ್ರೆಷ್ಟು ಬಿಟ್ರೆಷ್ಟು ? ಅದಕ್ಕೇ ಅದು ಶ್ವೇತಪತ್ರ !'

'ಅಲ್ಲಲೇ, ಇಷ್ಟಕಂದು ರಂಪಮಾಡಿ ಆಮ್ಯಾಲೆ ಯಾಕೆ ಇದನ್ನು ಹೊಂಡ್ಸಿ ದರು ? ಅಕಾಲಿಗಳು ಅಂದ್ರೆ ಯಾರು ? ಭಿಂದ್ರನ್‌ವಾಲೆ ಅನ್ನದು ಯಾಕೆ? ಗೌರ್‍ಮೆಂಟ್ ಇದ್ರೂ ಗೂಡಾಚರ್‍ಯ ಯಾಕೆ ವಿಫಲಾತು ? ಅಂಥ ಚರ್‍ಯ ಇಟ್ಗಂಡೇನು? ಈಗೇನೋ ಷಹೀದಿ ಜಾಥಾ ಅಂತ ಬಂದತಂತಲ್ಲ, ಏನು ಬರ್‍ತತೋ ? ಯಾಕೆ ಬರ್‍ತತೆ?'

"ಎಲೇ ದುಬ್ಗಾ, ಹಿಟ್‌ಲಿಸ್ಟ್ ಅಂದ್ರೇನು ಗೊತ್ತೇನೋ?"

"ಈಗ ತಳಪಾಯಿಂಟ್ ತಂದೆಲೇ ರಾಯ! ಎಂಥಾ ತಲೇನೋ ನಿಂದು ? ಮರ್‍ತೇಬಿಟ್ಟಿದ್ನೆಲ್ಲೋ ಹಿಟ್‌ಲಿಸ್ಟ್ ಅಂದ್ರೇನ್ಲೇ? ಅದು ಬಲಾನೋ ಶ್ವೇತಪತ್ರ ಬಲಾನೋ ? ಇದೇನೋ ಆಗೆತೆ ತಗ್ಯಲೇ! ಇಷ್ಟಕ್ಕೇ ನಿಲ್ಲಲ್ಲ ರಂಪ. ಸಿಕ್ಕರೇನು ಕಮ್ಮೆಲ್ಲ ತೆಗಿ. ಅವರ್‍ನ ಸಮಾಧಾನ ಪಡ್ಸಿ ಬುಕ್‌ತಗಿ. ಅಷ್ಟಕಂದು ಜನ ಸಿಕ್ರು ಸತ್ರೆ ಅವರ್‍ಗೆ ಸಿಟ್ಬರದಿಲ್ಲೇನು ? ನಮ್ಮ ಹಿಂದೂಗಳೂ ಸತ್ರಂತಲ್ಲಾ ಯಾರು ಯಾಕೆ ಕೊಂದ್ರು?"

"ನೋಡಲೇ ಗುರ್‍ಸಿ, ಇದೇನೋ ಖಂಡಿತ ಆಗೆತೆ. ಹಿಂದೂಗಳು ಅಂದ್ರೆ ಕಮ್ಯೂನಲ್. ಹಂಗೆಲ್ಲಾ ಮಾತಾಡ್ಬಾರ್‍ದು" ಎಂದೆ.

"ಅದ್ಯಾಕೆ ಕಮ್ಯೂನಲ್. ಕಮ್ಯೂನಲ್ ಅಂದ್ರೇನು?"

ಗುರ್‍ಸಿಯ ಪ್ರಶ್ನೆಗಳು ಚಿರಂತನವಾದವು.

"ಕೆಪ್ರಲೇ ಗುರ್‍ಸಿ ನೀನು. ಭಿವಂಡಿ ಒಳ್ಗೆ ಏನಾತು ? ನಮ್ಮ ಪೇಪ್ರುಗಳು ಏನ್ಬರಿತವೆ ? "ಎರಡು ಗುಂಪುಗಳ ಘರ್ಷಣೆ" ಅಂತ ಬರಿತವೆ. ಆ ಗುಂಪುಗಳ ಹೆಸ್ರು ಬರದ್ರೆ ಅದು ಕಮ್ಯೂನಲ್. ಯಾತ್ರ ಪೇಪ್ರು ನಡಸ್ತಿಯೋ"

"ಯಾತ್ರ ಪೇಪ್ರು ನಡಸ್ತಿ ಅಂದೆಲ್ಲಾ ಅದು ಕರೆಂಟ್, ಪೇಪ್ರು. ಮಸಿ, ಅಚ್ಚಿ

ನ್ಮಳೆ ರೇಟು ಹೆಂಗೇರ್ತ್ವವೆ ಗೊತ್ತೆ? ಎಲ್ಲರ್ರೂ ಬಾಯಿಗ್ಬಂಧಂಗೆ ಬೈದಿದ್ರೆ ನಮ್ಮೋರು ಓದಲ್ಲ, ಬೈದ್ರೆ ತೌಡು ಹರಿತರೆ ಅವ್ರು. ಈಗ ಒಂದು ಪಂಜಾಬ್ ವಿಶೇಷಾಂಕ ತರ್ಬೇಕು ನಾನು. ಮುಗಿಲಳ್ಳಿ ಸಿಕ್ರ್ರೆ ಯಾರೂ ಏನೂ ಹೇಳ್ಲಿಲ್ಲ. ನಿಂಗ್ಯಾರಾರಾ ಗೊತ್ತಿದ್ರೆ........"

ನನಗೆ ಖುಷಿಯಾಯಿತು. ನಮ್ಮ ಕಾಲಾಸಿಂಗ್ ಬಳಿಗೆ ಗುರ್ನಿಯನ್ನು ಕರೆದು ಕೊಂಡು ಹೋದೆ. ನನಗೆ ರಾಜಕೀಯ ಅಂದ್ರೆ ಅಲರ್ಜಿ. ನಾನು ಇಂಟರ್ಮೀಡೀಟ್ (ಅಂದ್ರೆ ಈಗಿನ ಪಿ ಯು ಸಿ) ಓದುತ್ತಿದ್ದಾಗ ಭಾರತಕ್ಕೆ ಸ್ವಾತಂತ್ರ್ಯ ಬರುವ ತನಕ ಒಂದು ಪೇಜೂ ಓದುವುದಿಲ್ಲ ಎಂದು ಪುಸ್ತಕ ಕಟ್ಟಿಟ್ಟಿದ್ದೆ. ಆಗ ಹೋರಾಟಕ್ಕೆ ದುಡ್ಡು ಬೇಕೇಬೇಕು ಎಂದು ನಮ್ಮ ನಾಯಕ ಹೇಳಿದ. ನಾವೆಲ್ಲಾ ದುಡ್ಡು ಜೋಡಿಸಿ ಕೊಟ್ಟೆವು. ಅವನು ತಲೆತಪ್ಪಿಸಿಕೊಂಡ. ನಾವು ಸ್ವತಂತ್ರರಾದಮೇಲೆ ಬೆಂಗಳೂರಿ ನಲ್ಲಿ ವಿಧಾನಸೌಧದ ಬಳಿ ಅವ ಕಂಡ. ದುಡ್ಡು ತೆಗೆದುಕೊಂಡು ಓಡಿ ಹೋದದ್ದು ಸರಿಯೇ? ಅದಕ್ಕೆ ಅಕೌಂಟು ಕೊಡಬೇಡವೇ? ಎಂದೆಲ್ಲಾ ಅವನನ್ನು ಕೇಳಿದೆ.

"ರಾಯಲೇ, ನೀನು ಕಪಂಗಿ. ಅದೆಲ್ಲಾ ರಾಜಕೀಯ. ನಿನಗೆ ಅರ್ಥವಾಗು ವುದಿಲ್ಲ. ನೀನು ಸೆಕೆಂಡ್ ಡಿವಿಷನ್ ಗುಮಾಸ್ತೆಯೂ ಆಗುವುದಿಲ್ಲ. ಒಟ್ಟಿಗೆ...." ಎಂದೆಲ್ಲಾ ಹೇಳಿದ. ನನ್ನ ಅಲರ್ಜಿಗೆ ಅವನೇ ಕಾರಣ.

ಆದರೂ ಗುರ್ನಿ, ಮುಗಿಲುಹಳ್ಳಿ ಮಹಾನಗರವನ್ನು ಬಿಟ್ಟು ನಮ್ಮ ಬಡ ಊರಿಗೆ ಬಂದಮೇಲೆ ಅವನಿಗೆ ಸಹಾಯಮಾಡದಿರಲು ಸಾಧ್ಯವೇ? ಇನ್ವೆಸ್ಟಿಗೇಟಿವ್ ರಿಪೋರ್ಟಿಂಗ್ ಓದಿ ಹಲ್ಲು ಹಲ್ಲು ಬಿಟ್ಟು ಹೊಗಳಿದರಾಯ್ತೇ? ಇನ್ವೆಸ್ಟಿಗೇಷನ್ನಲ್ಲಿ ಭಾಗವಹಿಸುವ ಸುಸಂದರ್ಭವನ್ನು ಕಳೆದುಕೊಂಡರೆ ಸಿಕ್ಕೀತೇ? ಅದೂ ಪಂಜಾಬ್ ಪರಿಸ್ಥಿತಿಯಂತಹ ಸೂಕ್ಷ್ಮ ವಿಷಯದಲ್ಲಿ.

ಕಾಲಾಸಿಂಗ್ ಹೋಟಲಿನ ದಾರಿಯಲ್ಲಿಯೇ ಗುರ್ನಿಗೆ ಹಿಟ್‌ಲಿಸ್ಟಿನ ಸುದ್ದಿತಿಳಿಸಿದೆ ಅವರು ಒಂದು ಬಿಳೀ ಕಾಗದದಲ್ಲಿ ಹೆಸರುಗಳಪಟ್ಟಿ ಬರೆದಿಟ್ಟಿದ್ದರು. ಯಾರ್ಯಾರ ಹೆಸರು ಅದರೊಳಗಿತ್ತೋ ಅವರೆನ್ನೆಲ್ಲಾ ಉಗ್ರಗಾಮಿಗಳುಕೊಲ್ಲುತ್ತಿದ್ದರು. ಉಗ್ರಗಾಮಿ ಗಳು ಯಾರು ಎಂದು ಕೇಳದಿರು ನನ್ನ ವಿವರಣೆಯನ್ನು ಮಧ್ಯದಲ್ಲೇ ನಿಲ್ಲಿಸಿದ ಗುರ್ನಿ ಕೇಳಿದ.

"ನಂ ಸಾರ್ಜೆಂಟ್ ಹೆಸರೇನಾರ ಅದ್ರಗೈತೋಹೆಂಗೆ" ಈ ಸಾರ್ಜೆಂಟ್ ಮುಗಿ ಲು ಹಳ್ಳಿಯ ವಾಹನ ಸಂಚಾರೀವಿಭಾಗದ ಮುಖ್ಯಸ್ಥ, ಗುರ್ನಿ, ವಾಹನ ಸಂಚಾರೀ ಸಪ್ತಾಹದ ಪುರವಣಿಯಲ್ಲಿ ಮುಗಿಲುಹಳ್ಳಿಯ ಸಂಚಾರ ವಿಭಾಗದ ಕಾರ್ಯವನ್ನು ಹೀಗೆಂದು ಹೊಗಳಿದ್ದ.

"ಈ ಟ್ರಾಫಿಕ್ ಪೋಲೀಸರಿಂದ ನಮ್ಮೂರಿಗೆ ಉಳಿಗಾಲವಿಲ್ಲ. ಹೆದ್ದಾರಿಯ ಶಕಟಾಸುರರಂತೆ ವರ್ತಿಸುವ ಲಾರಿಯುವರು, ಫುಟ್‌ಪಾತಿನ ಮೇಲಿನ ಅಂಗಡಿಯುವರು ಕುಡಿದು ಮೋಟರ್‌ಬೈಕ್ ನಡೆಸುವ ಯುವ, ವೃದ್ಧ, ಶಿಶು ಜನತೆ, ನಡುನಡುವೆ ತಮ್ಮ ಅದೃಷ್ಟವನ್ನು ಪರೀಕ್ಷಿಸುವ ಬಾಲಕರ ರಸ್ತೆಕ್ರಾಸಿಂಗ್, ಬರೀಬ್ಲೌಸ್ ಲಂಗ ಧರಿಸಿದ ಶಾಲಾ ಕಾಲೇಜು ಹುಡುಗಿಯರು, ರಸ್ತೆ ನಡುವೆ ಹಾರಿಬರುವ ಚಿನ್ನಿ, ಚೆಂಡುಗಳು, ಇವೆಲ್ಲಾ ಸಾಲದೆಂಬಂತೆ ದಿನಕ್ಕೊಮ್ಮೆ ಒಂದು ರಸ್ತೆಯನ್ನು ತಮಗೆ ತಿಳಿದ ದಿಕ್ಕಿನಲ್ಲಿ ಒನ್‌ವೇ ಮಾಡಿ, ಚೌಕಗಳಲ್ಲಿ ತೂಕಡಿಸುತ್ತಾ, ಜೇಬುಗಳ್ಳರಿಗೆ ಸಾಮೀಲಾಗಿರುವ ಸಂಚಾರಿ ಪೋಲೀಸರು! ಶಿವನೇ ಸಿದ್ಧೇಶಾ, ಈ ಊರಿಗಿಂತ ಪಂಜಾಬೇ ಹೆಚ್ಚು ಸುರಕ್ಷಿತ' ತತ್ಫಲವಾಗಿ ಸಾರ್ಜೆಂಟ್, ಗುರ‍್ನಿಯ ಮೊಪೆಡ್ಡನ್ನು ಸ್ಟೇಷನ್ನಿನ ಲಾಯದಲ್ಲಿ ಕಟ್ಟಿಹಾಕಿದ್ದಾನೆ" ಆಳುವ ಪಕ್ಷ ಅಧಿಕಾರಕ್ಕಂಟಿದಂತೆ, ಸಾರ್ಜೆಂಟ್, ಗುರ‍್ನಿಯ ಮೊಪೆಡ್ಡಿಗೆ ಅಂಟಿಕೊಂಡೇ ಇದ್ದಾನೆ. ಬಿಟ್ಟಿಲ್ಲ, ಅದನ್ನು ನೆನೆದು ಗುರ‍್ನಿ ಭಾವೋದ್ರಿಕ್ತನಾಗಿದ್ದ.

"ರಾಯಲೇ ನನ್ನ ಮೊಪೆಡ್ ಬಿಡ್ಸಕ್ಕೆ ಹೇಬಿಯಸ್ ಕಾರ್ಪಸ್ ಹಾಕಿದರೆ ಹೆಂಗೆ?" ನಾನು ತಲೆದೂಗಿಹೇಳಿದೆ 'ಹೇಬಿಯಸ್ ಕಾರ್ಪಸ್ ಹಾಕಿ ನಿನ್ನ ಟಿವಿಯಸ್ ಎಕ್ಸೆಲ್ ಬಿಡಿಸಿಕೋ, ಆಮೇಲೆ ಅದಕ್ಕೊಂದು ಆ್ಯಂಟಿಸಿಪೇಟರಿ ಜಾಮೀನುತೆಗೆದುಕೋ"

ಗುರ‍್ನಿತಲೆದೂಗಿ ಹೇಳಿದ "ಏನ್ರಲೆನಲೇ ನಿಂದು ರಾಯ? ಏನಂತಿ ನೀನು?" ಬೇಗ ದಾರಿ ಸಾಗಿ, ನಾವು ಕಾಲಾಸಿಂಗ್‌ನ ಹೈವೇ ಹೋಟೆಲನ್ನು ತಲುಪಿದೆವು. ಅದು ಮೂರುಕವಲುದಾರಿಗಳ ಕೇಂದ್ರದಲ್ಲಿದೆ—ವಿಚ್ಛಿದ್ರಕಾರೀ ಭಯೋತ್ಪಾದನೆ, ಪ್ರತ್ಯೇಕ ತಾಮನೋಭಾವ ಹಾಗೂ ರಾಷ್ಟ್ರೀಯತೆಯ ರಾಜಮಾರ್ಗಗಳ ನಡುವೆ ಇರುವ ಪಂಜಾಬಿನಂತೆ, ಈ ಕೇಂದ್ರದ ಅನಭಿಷಿಕ್ತ ಒಡೆಯನಂತಿದ್ದ ಕಲ್ಲಪ್ಪ (ಕಾಲಾಸಿಂಗನ ಸ್ಥಳೀಯ ನಾಮಾಂತರ) ಈಗ ತಡಬಡಾಯಿಸಿಹೋಗಿದ್ದಾನೆ. ಒಲೆಯ ಮುಕ್ಕುಪ್ಪಿನಂತೆ ಇನ್ನೆರಡು ಹೋಟೆಲುಗಳು ತಲೆಯೆತ್ತಿವೆ, ಅವನ ಗಿರಾಕಿಗಳು ಹರಿಹಂಚಾಗಿದ್ದಾರೆ. ಹತ್ತಿರದ ಹಳ್ಳಿಯಲ್ಲಿರುವ ಅವನ 20 ಎಕರೆ ಜಮೀನು ಅವನ ಆರ್ಥಿಕ ಭದ್ರತೆಗೆ ಅಡಿಪಾಯ. ಆದರೆ ವ್ಯಾಪಾರ ಮುಂಗಮಾಯ ನಾಲ್ಕು ಸಾರಾಯಿ ಅಂಗಡಿಗಳು, ಹೋಟೆಲಿನ ಮುಖವಾಡ ಹೊತ್ತುಮೆರೆಯುತ್ತಿವೆ.

ಗುರ‍್ನಿಯನ್ನು ಕರೆದುಕೊಂಡು ಹೋದೊಡನೆ ಅವನೆಂದ

"ನಮಸ್ತೇಜಿ, ಏ ಬೇಕೂಫ್ ಕೌನ್?"

"ನಿನ್ನಾಪ್ಪ, ನಿಮ್ಮಪ್ಪಲೇ ಬೇಕುಫ" ಎಂದು ಗುರ‍್ನಿ ಸಿಡಿದೆದ್ದ.

ನಾನು ಕಾಲಾಸಿಂಗನಿಗೆ ಗುರ‍್ನಿಯಪರಿಚಯ ಮಾಡಿಸಿಕೊಟ್ಟು ಅವನು ಬಂದ

ಕೆಲಸವನ್ನು ತಿಳಿಸಿದೆ. ಕಾಲಾಸಿಂಗನೊಡನೆ ನಡೆದ ಮಾತುಕತೆಯ ಚಿಕ್ಕ ಭಾಗವೊಂದನ್ನು ಕೊಡುತ್ತೇನೆ.

ಕಾಲಾಸಿಂಗನ ಮತ್ತು ಗುರ್ನಿಯ ಸಂಭಾಷಣೆ ಶುದ್ಧ ಅಪಭ್ರಂಶ ಭಾಷೆಯಲ್ಲಿ ನಡೆಯಿತು. ಅದರ ಶಿಷ್ಟವೆನಿಸಬಹುದಾದ ಅವತರಣಿಕೆ ಇಲ್ಲಿದೆ.

ಗುರ್ನಿ— ಈಗ ಹಿಂಗೆಲ್ಲಾ ಆಗೆತಲ್ಲಾ ಏನು ಕಾರಣ ?

ಕಾಲಾ— ಶುದ್ಧ ಅನ್ಯಾಯ. ನನ್ನೊಬ್ಬನ್ದೇ ಹೋಟಲು ಇರತನಕ ಇಲ್ಲಿ ಕುಡಿತ. ಹಾದರ ಏನೂ ನಡಿತಿರ್ಲಿಲ್ಲ. ಈ ಖುಷವಂತ, ಹರಕಿಶನ್ ಇವರ ಹೋಟ್ಲುಗಳು ಬಂದು ಈ ಜಾಗ ನರಕಕ್ಕಿಂತ ಕೀಳು. ರಾತ್ರೆ ಇಲ್ಲಿ ಯಾರೂ ಇರಹಂಗಿಲ್ಲ

ಗುರ್ನಿ— ಹರಮಂದಿರ್ ಸಾಹೇಬ್‌ನಗೆ ರಾಕೆಟ್ ಲಾಂಚರ್, ಸ್ಟೆನ್‌ಗನ್, ಮಿಷಿನ್ ಗನ್, ಡ್ರಗ್ಸ್ ಬಂದವಲ್ಲ, ಇದಕ್ಕೆ ಯಾರು ಕಾರಣ ?

ಕಾಲಾ— ಈಗ ಇಲ್ಲಿ ಟೇಪ್ ರಿಕಾರ್ಡರ್, ಕ್ಯಾಸೆಟ್ ಸ್ಮಗ್ಲಿಂಗ್ ನಡೀತಾ ಆದೆ. ಯಾಕೆ ಹೇಗೆ ಯಾರು ಅಂತ ಹೇಳದು ಹೆಂಗೆ? ನೋಡ್ರೀ ಇಲ್ಲಿಗೊಂದು ಪೋಲೀಸ್ ಸ್ಟೇಷನ್ ಬೇಕು.

ಗುರ್ನಿ— ಇಷ್ಟಂದು ಗಲಾಟೆ ಮಾಡಿದನಲ್ಲಾ ಭಿಂದ್ರನ್‌ವಾಲೆ, ಅಷ್ಟೊಂದು ಸಪೋರ್ಟ್ ಹೆಂಗೆ ಬಂತು, ನಿಂಗೇನಾರ ಗೊತ್ತೇ ?

ಕಾಲಾ— ನಮ್ಮ ಊರ ಮಗ್ಗುಲು ಊರ ಹುಡುಗ ಅವನು. ನನ್ನ ಬಾಲ್ಯ ಸ್ನೇಹಿತ. ಈಗ ಹದಿನೈದು ವರ್ಷದ ಕೆಳಗೆ ನನಗೆ ಒಂದಿಪ್ಪತ್ತು ರೂಪಾಯಿ ಕೈಗಡ ಕೊಟ್ಟಿದ್ದ. ಅಂಥನ್ನೂ ಕೆಡಿಸಿ ಬಿಡ್ತು ಈ ಪಾಲಿಟಿಕ್ಸ್,

ಗುರ್ನಿ— ಈಚೆಗೆ ಏನಾರ ಕಾಗ್ದ ಬರ್ದಿದ್ದನೇ?

ಕಾಲಾ— ನಾನು ಬಂದು ಹದಿನಾರು ವರ್ಷ ಆತು. ಹೊಟ್ಟೆಪಾಡಿಗೆ ದುಡಿಯುವು ದರಲ್ಲಿ ಎಲ್ಲಾ ಮರ್ತುಬಿಟ್ಟೆ. ಈಗ ಇಲ್ಲಿ ಈ ನರಕ ಆರಂಭವಾಗಿದೆ. ಕುಡ್ತ, ಬಡ್ದಾಟ ಮಾರಾಮಾರಿ, ಹಾದರ ಇಲ್ಲಿಂದ ಇನ್ನೆಲ್ಲಿಗಾರೂ ಹೋಗಬೇಕು.

ಗುರ್ನಿ— ನೀನು ನಿಹಾಂಗೋ ಅಕಾಲೀನೋ ?

ಕಾಲಾ— ನಾನು ಸಿಕ್, ನಾನಕರ ಶಿಷ್ಯ.

ಗುರ್ನಿ— ಖಲಿಸ್ತಾನ್ ಅಂದ್ರೇನು?

ಕಾಲಾ— ಅಂಥಾವು ಇನ್ನೊಂದೆರ್ಡು ಆದ್ರೆ ಮುಸಲ್ಮಾನರು, ಬ್ರಿಟಿಷರ ಕಾಲಕ್ಕೆ ಹಿಂದಕ್ಕೆ ಹೋಗ್ತೀವಿ ಅಷ್ಟೇ.

ಗುರ್ನಿ— ನನ್ನ ವಿಶೇಷ ಸಂಚಿಕೆಗೆ ಒಂದು ಸಂದೇಶ ಕೊಡು.

ಕಾಲಾ— ಒಂದು ಚಾಯ್ ಕುಡೀರಿ, ವಿಶೇಷ ಸಂಚಿಕೆ ಕೈಬಿಡ್ರಿ. ಗೊತ್ತಿಲ್ಲದ ಪತ್ರ ನದೀನ ಈಜಿ ದಾಟುವುವಕ್ಕೆ ಹೋಗಬಾರದು.

ನವ ಕನ್ನಡದ ಕೈಗನ್ನಡಿ.

- ಲೀಲಾ ಮಿರ್ಜೆ

ಜೈಲು— ರಾಜಕಾರಣಿಗಳ ಪುಣ್ಯಸ್ಥಳ.

ಕನ್ನಡ— ಬೀದಿ ದೀಪಗಳು ಪುಡಿಯಾಗಲು ಕಾರಣವಾದ ಭಾಷೆ.

ಮೇಜು— ನಾಲ್ಕು ಕಾಲಿನ ವಸ್ತು. ಲಕ್ಷ್ಮೀ ಇದರ ಕೆಳಗೆ ಓಡಾಡುತ್ತಾಳೆ.

ಫೈಲು— ಕೆಳಗೆ ಲಕ್ಷ್ಮೀ ಓಡಾಡಿದಾಗ, ಮೇಜಿನ ಮೇಲೆ ಜರುಗುವ ಕಡತ.

ಲಂಚ— ಕಲೆಗಳಲಿ ಪರಮಕಲೆ. ಜೀವನದಲ್ಲಿ ಉದ್ಧಾರವಾಗಬೇಕಾದರೆ ಕಲಿಯಲೇ ಬೇಕಾದ ಲಲಿತಕಲೆ.

ಅಮೇರಿಕ— ಅಪ್ಪ ಅನ್ನಹಾಕದಿದ್ದರೆ, ಚಿಕ್ಕಪ್ಪಹಾಕುತ್ತಾನೆಂದು ಭಾರತದ ಮೇಧಾವಿಗಳು ಹೋಗುವ ಸ್ಥಳ.

ಹಿಪ್ಪಿ— ಹೆಣ್ಣು ಹುಡುಗ.

ಕ್ರಿಕೆಟ್— ಕಾಲೇಜು ಡಿಗ್ರಿಗಿಂತ ಸಾವಿರಪಾಲು ಉತ್ತಮವಾದ ಮಹಾವಿದ್ಯೆ, ಹಣಗಳಿಸಲು.

ನೀರು— ಬೆಂಗಳೂರಿನ ಕೆಲವು ನಲ್ಲಿಗಳಲ್ಲಿ ಒಮ್ಮೊಮ್ಮೆ ಬರುವ ದ್ರವ.

ನೂನ್ ಶೋ— ವಿದ್ಯಾರ್ಥಿಗಳ ಆಪತ್ ಬಾಂಧವ.



"ಒಂದು ಮನೇಲೇ ಇಷ್ಟೊತ್ತು ಆದ್ರೆ ಹ್ಯಾಗೆ ತಾಯಿ?...."

ಅರಮನೆಯಲ್ಲಿ ಕೈಲಾಸಂ

ಕೈಲಾಸಂಗೆ ಒಮ್ಮೆ ಅರಮನೆಯಿಂದ ಆಹ್ವಾನ ಬಂದಿತು. ಅವರು ತಮ್ಮ ನಾಟಕತಂಡದೊಡನೆ ಮೈಸೂರು ಅರಮನೆಗೆ ಹೋದರು.

ಪ್ರದರ್ಶನದ ಹಿಂದಿನಸಂಜೆ ದರ್ಬಾರ್ ಬಕ್ಷಿಯವರಿಂದ ಅವರಿಗೆ ಬುಲಾವ್ ಬಂದಿತು. ಕೈಲಾಸಂಗೆ ಅಸಾಧ್ಯಕೋಪ, ಆದರೆ ಮಹಾರಾಜರ ಆಜ್ಞೆಯನ್ನು ಪಡೆಯುವವರೂ, ಕಲಾವಿದರಿಗೆ ಹಣಕೊಡುವವರೂ ಬಕ್ಷಿಗಳು. ಅವರನ್ನು ಗೆದ್ದು ಕೊಳ್ಳದಿದ್ದರೆ ಮಹಾರಾಜರು ಸಾವಿರ ಹೇಳಿದರೆ ತಮಗೆ ಮುನ್ನೂರೇ ಪ್ರಾಪ್ತಿಯಾದರೂ ಏನೂ ಮಾಡುವಂತಿಲ್ಲ. ಆದ್ದರಿಂದ ಕೈಲಾಸಂ ಕೋಪವನ್ನು ನುಂಗಿಕೊಂಡು ಬಕ್ಷಿಯವರಲ್ಲಿಗೆ ಹೋದರು. ಅವರೆದುರು ಬಾಗಿ, ಕೊನೆಯ ಪಕ್ಷ ಒಂದು ಸಾವಿರವಾದರೂ ಅವರು ಕೊಡಬಹುದಾದಷ್ಟು ಬಾಗಿ–ನಿಂತರು, ಹೋಂ ರೂಲಿನ ಬೋರನಂತೆ. ಬಕ್ಷಿಯವರು ಕೃಪೆಮಾಡಿ ಈ ವ್ಯಕ್ತಿಯಕಡೆನೋಡಿದರು

"ಕೈಲಾಸಂ ?" ಎಂದರು.
"ನಮಸ್ಕಾರ, ಬಕ್ಷಿಯವರಿಗೆ" ಎಂದರು ಕೈಲಾಸಂ ಇನಿದಾಗಿ.
"ಗುಡ್‌ಮಾರ್ನಿಂಗ್" ಎಂದರು ಬಕ್ಷಿಯವರು
"ಗೂಊಡ್‌ಮೌರ್ನಿಂಗ್" ಎಂದು ಕೇಳಿಸುವಂತೆ ನಂತರ ಸಿಡಿಲು.
"Much English must not be" ಎಂದರು ಬಕ್ಷಿಯವರು.

ಸಹಜವಾಗಿಯೇ ಈ ಮಾತು ಕೈಲಾಸಂ ನಾಟಕಗಳ "ಕನ್ನಡಾಂಗ್ಲೋ" ಸಂಭಾಷಣೆಗಳ ಕುರಿತಾದದ್ದು ಒಂದು ಕ್ಷಣದಲ್ಲಿ ಅರ್ಥಮಾಡಿಕೊಂಡ ಕೈಲಾಸಂ ಅಷ್ಟೇ ಗಂಭೀರವಾಗಿ "But some English will be" ಎಂದರು.

ಬಕ್ಷಿಯವರಿಗೆ ಚೆನ್ನಾಗಿ ಅರ್ಥವಾಯಿತು. ಇಂಗ್ಲೆಂಡಿನಲ್ಲಿ ಇಂಗ್ಲಿಷರನ್ನೇ ಗೆದ್ದ ಕೈಲಾಸಂ ಕರೆಕ್ಟ್ ಇಂಗ್ಲಿಷ್ ಮಾತಾಡಿದ್ದರೆ ಬಕ್ಷಿಯವರಿಗೆ ಕಿರಿಕಿರಿಯಾಗುತ್ತಿತ್ತು.

ಇಂಥ ಪ್ರಸಂಗಗಳನ್ನು ಚಾ–ಚೂ ತಪ್ಪದೆ ಕೈಲಾಸಂ ಹೇಳಬಲ್ಲವರಾಗಿದ್ದರು.
ಆದರೆ ಬಕ್ಷಿಯವರಿಂದ ಬಂದ ಹಣ ಎಷ್ಟು ?
"ಯಾರಿಗೆ ನೆನಪಿರುತ್ತದೆ."

ತಮಗೆ ಬಂದ ಹಣ, ಆದ ನಷ್ಟ ಅಥವಾ ಲಾಭಗಳನ್ನು ಕೈಲಾಸಂ ಎಂದೂ ನೆನಪಿಡುತ್ತಿರಲಿಲ್ಲ.

- ಆಧಾರ

(ರಾ.ಶಿ.ಯವರಿಗೆ ಕೈಲಾಸಂ ಹೇಳಿದ್ದು)

ನಮ್ಮ ತಲಕಾಡು ಯಾತ್ರೆಯಲ್ಲಿ ನಾವು ಯಾವ ಯಾವ ಊರು ದಾಟ ಬೇಕಾಗುತ್ತೆ ಅಂತ ನಮ್ಮಲ್ಲಿ ಯಾರಿಗೂ ಗೊತ್ತಿರಲಿಲ್ಲ. ಹಿಂದೆ ಮಾರ್ಕೋಪೋಲೋ ಚೀನಾ ಪ್ರವಾಸ ಕೈಕೊಂಡಿದ್ದ ಹಾಗೆ ರಾಜ ಚಂದಿ ನಾವು, ತಲಕಾಡ ಪ್ರವಾಸ ಶುರು ಮಾಡಿದ್ದೆವು. ಆದರೆ ಮಾರ್ಕೋಪೋಲೋ ಸೈಕಲ್ ಮೇಲೆ ಹೊರಟ ಹಾಗೆ ದಾಖಲೆ ಇಲ್ಲ—ಅದೃಷ್ಟವಂತ.

ಕಂಭೀಹಳ್ಳಿ ಬಿಟ್ಟು ನಾವು ಹೊರಟಮೇಲೆ ನಮ್ಮ ಮುಂದಿನ ಸ್ಟಾಪ್-ಕೊಳ್ಳೀಹಳ್ಳಿ. ಮಧ್ಯಾಹ್ನವಾಗಿತ್ತು, ಉರಿ ಬಿಸಿಲು, ಕೊಳ್ಳೀಹಳ್ಳಿ ಹೆಸರಿಗೆ ಒಪ್ಪುತ್ತಿತ್ತು. ಊರ ಮುಂದೆ ರಸ್ತೆ ತಿರುಗುವಲ್ಲಿ ಒಂದು ಮಾವಿನ ಎಲೆ ತೋರಣ ಕಟ್ಟಿದ್ದರು. ಸರಿ ಊರಿನ ಜಾತ್ರೆ ಇರಬಹುದು ಅಂತ ನುಗ್ಗಿದೆವು—ಚಂದಿ ರಾಜ ನಾನು-ಸಾಲಾಗಿ ಊರಿನಲ್ಲಿ ತಿಳಿಯಿತು-ಜಾತ್ರೆ ಅಲ್ಲ-ಕಾಳಭೈರವನ ಗುಡಿಯಲ್ಲಿ ಕಿಟ್ಟಪ್ಪ ಮಾಸ್ತರ ಮಗಳ ಮದುವೆ ಅಂತ. ಪ್ರಾಯಶಃ ನಮ್ಮನ್ನು ಬೀಗರ ಕಡೆಯುವರು ಅಂತ ತಿಳಿದಿರಬಹುದು. ಹಾದಿಯಲ್ಲಿ ನಮ್ಮನ್ನು ನಿಲ್ಲಿಸಿ "ಗುಡೀಲಿ ಮದುವೆ ನಡೀತಿದೆ ಬನ್ನಿ" ಅಂತ ಕರ್ಕೊಂಡು ಹೋದರು.

"ಏನ್ರಯ್ಯ ಮಾಡೋದು ಈಗ?" ರಾಜ ಕೇಳಿದ.

"ಮದುವೆ ಊಟ ಹೊಡೆಯೋದು" ಅಂದ ಚಂದಿ.

ಚಂದಿ ಒಂದು ಘಂಟೆ ಕಾಲ ಲೆಕ್ಚರ್ ಕೊಟ್ಟಿದ್ದಿದ್ದರೂ ಇದಕ್ಕಿಂತಲೂ ಸಮಯೋಚಿತ ಮಾತು ಹೇಳೋಕೆ ಸಾಧ್ಯವಿರುತ್ತಿರಲಿಲ್ಲ.

"ನಾವು ಯಾರ ಕಡೆಯೋರು ಅಂತ ಹೇಳೋದು ?" ಕೇಳಿದ ರಾಜ.

"ನಮ್ಮ ಬಕ್ರಾನ ಕೇಳು" ಅಂತ ಚಂದಿ ನನ್ನ ಕಡೆ ತೋರಿಸಿದ.

"ಬಕ್ರಾ ಕಡೆಯೋರು ಅಂತಲೇ ಹೇಳ್ಕೊಳೋಣ" ಅಂದೆ ಬಿಗುವಾಗಿ.

"ರೈಟ್" ಅಂದ ಚಂದಿ.

ಕಾಳಭೈರವನ ಗುಡಿಯ ಒಂದು ಭಾಗದಲ್ಲಿ ಮದುವೆ ಮಂಟಪ ಕಟ್ಟಿದ್ದರು. ಸುಮಾರು ನೂರೈವತ್ತು ಜನರು ಸೇರಿದ್ದರು. ನಾವು ಬರುವ ವಿಷಯ ಮೊದಲೇ ತಿಳ್ಸಿದ್ದರು ಅಂತ ಕಾಣುತ್ತೆ. ಹೆಣ್ಣಿನ ತಂದೆ ಕಿಟ್ಟಪ್ಪ ಮಾಸ್ತರು ರೇಷ್ಮೆ ಮಗುಟಧಾರಿಯಾಗಿ ನಮ್ಮನ್ನು ಎದುರು ಗೊಳ್ಳೋಕೆ ಬಂದರು.

"ನಮಸ್ಕಾರ ಬನ್ನಿ ಬನ್ನಿ -ಧಾರೆ ಹೊತ್ತಿಗೆ ಸರಿಯಾಗಿ ಬಂದಿದ್ದೀರಿ...."

ಮುಂದೆ ಆತನಿಗೆ ಮಾತು ಹೊರಡಲಿಲ್ಲ. ಪ್ರಾಯಶಃ- ನಮ್ಮನ್ನು ಬಂಧುಗಳೆಂದು ಭಾವಿಸಬೇಕೋ-ಅತಿಥಿಗಳೆಂದು ಭಾವಿಸಬೇಕೋ-ಬಾದರಾಯಣ ಸಂಬಂಧೀಕರೆಂದು ಭಾವಿಸಬೇಕೋ-ಗಂಟುಕಳ್ಳರೆಂದು ಭಾವಿಸಬೇಕೋ-ಮನಸ್ಸಿನಲ್ಲೇ ಲೆಕ್ಕಹಾಕುತ್ತಿದ್ದ ಹಾಗಿತ್ತು.

"ನಾವು ಮೂರು ಜನಾನೂ ಬಕ್ರಾನಂಗಲ್‌ನಲ್ಲಿ ಇಂಜಿನೀರ್‌ಗಳು. ಕುಷೀಗೋಸ್ರ ಸೈಕಲ್ ಪ್ರವಾಸ ಹೊರಟಿದ್ದೇವೆ-ಭಾರತ ಯಾತ್ರೆ." ಅಂದ ಚಂದಿ.

"ತುಂಬಾ ಸಂತೋಷ. ನನ್ನ ಸೋದರಳಿಯ ಗೋಪಣ್ಣ ಅಲ್ಲೇ ಸೂಪರ್ ವೈಸರ್ ಆಗಿರೋದು. ಬನ್ನಿ ಅಥಿತಿ ದೇವೋ ಭವ, ಹುಡುಗರನ್ನ ಹರಸಿ ಊಟ ಮಾಡಿ ಹೋಗಬಹುದು" ಅಂದರು ಮಾಸ್ತರು.

ಇದಕ್ಕಿಂತಲೂ ಅನುಕೂಲವಾದ ಕಾರ್ಯ ನಮಗಿರಲಿಲ್ಲ. ವೃಥಾ ಬಿಗುವಾ ನವೂ ಇರಲಿಲ್ಲ.

ಕಿಟ್ಟಪ್ಪ ಮಾಸ್ತರು ಬೆಂಗಳೂರಿನವರು. ಲೋಯರ್ ಸೆಕೆಂಡ್ರೀಲಿ ಓದುತ್ತಿದ್ದಾಗ ಮನೆಯಿಂದ ಓಡಿ ಕೆಲವು ಸ್ನೇಹಿತರ ಜೊತೆ ಪೋಲಿ ಅಲೆದು ಕಳ್ಳತನಕ್ಕಿಳಿದು ಎರಡು ವರ್ಷ ಜೈಲು ವಾಸ ಅನುಭವಿಸಿದ ಮೇಲೆ, ತನ್ನ ಅಲೆದಾಟದಲ್ಲಿ ಕೊಳ್ಳಿ ಹಳ್ಳಿ ಸೇರಿದ್ದರು. ಒಬ್ಬ ರೈತನ ಮನೆ ಕೆಲ್ಸಕ್ಕೆ ಸೇರಿ ಮನೆ ಅಳಿಯನಾಗಿ ಊರಿನ ಪಟೇಲರ ಮೆಹರ್ಬಾನಿಯಿಂದ ಪ್ರೈಮರಿ ಶಾಲಾ ಮಾಸ್ತರಾಗಿದ್ದರು.

"ಏನೋ ಸ್ವಾಮಿ ನಾನು ಸ್ವತಃ ನನ್ನ ಜೀವನದಲ್ಲಿ ಸಾಕಷ್ಟು ತಪ್ಪುಮಾಡಿದೆ. ಹೇರಳವಾಗಿ ಅನುಭವಿಸಿದೆ. ಅವೆರಡನ್ನೂ ಮಾಡದಹಾಗೆ ನಮ್ಮ ಹುಡುಗರಿಗೆ ಕಲಿಸೋಕೆ ಪ್ರಯತ್ನ ಮಾಡ್ತಿದ್ದೇನೆ. ನಂದೂ ಒಂದು ಥರಾ ಪ್ರಾಯಶ್ಚಿತ್ತ ಅಂತ ತಿಳ್ಕೊಳ್ಳಿ." ಅಂದರು.

ವಧೂವರರನ್ನು ಮನಸಾರ ಹರಸಿ ಲಗ್ನದ ಊಟ ಮುಗಿಸಿ ಕಿಟ್ಟಪ್ಪಮಾಸ್ತರಿಗೆ ಧನ್ಯೋಸ್ಮಿ ಹೇಳಿ ಪುನಃ ರಸ್ತೆ ಹಿಡಿದೆವು.

"ಸೆನ್ಸ್ ಆಫ್ ಪ್ರಾಯಶ್ಚಿತ್ತ ಲೈಫ್‌ನಲ್ಲಿ ಬೆಸ್ಟ್ ಮೋಟಿವೇಷನ್ ಕಣ್ರೋ" ಅಂದ ರಾಜ-ಬೃಹಸ್ಪತಿ.

ಯಾರಿಗೂ ಹೇಳೋಣುಬ್ಯಾಡ —ಸೋಮಿ.

ನಿಜ ಹೇಳಿದರೆ ನಿಶ್ಚಿಂತೆ. ಇದೇ ಜುಲೈ ತಿಂಗಳಲ್ಲಿ 450 ಪ್ರೌಢಶಾಲೆಗಳೂ 160 ಕಿರಿಯಕಾಲೇಜುಗಳೂ ಆರಂಭವಾದವು, ಇದರಿಂದ ಸುಮಾರು 610 ಮುಖ್ಯ ಅತಿಥಿಗಳಿಗೂ, ಅಷ್ಟೇಮಂದಿ ಅಧ್ಯಕ್ಷರಿಗೂ ಉದ್ಘಾಟಕರಿಗೂ ಶಾಲಾಯೂನಿಯನ್ ಉದ್ಘಾಟನಾ ಸಮಾರಂಭಗಳಲ್ಲಿ ನೀತಿ ಬಾಧೆ ನೀಡುವ ಉದ್ಯೋಗಾವಕಾಶಗಳು ದೊರೆತಿವೆ. ಈಚೆಗೆ ಬಂಡ್ಲೇರ ಗಟ್ಟ ಪ್ರೌಢಶಾಲೆಯ ಸಮಾರಂಭದಲ್ಲಿ, ಅವರೇ ತಮ್ಮನ್ನು ಕರೆದುಕೊಂಡಂತೆ ಹುದ್ಘಾಟಕರು ಹೀಗೆಂದು ಹುದ್ಘೋಷಣೆ ಮಾಡಿದರು.

"ನಿಮ್ಮಂತಾ ಇದ್ಯಾರ್ತಿಗಳನ್ನು ನಾನು ನೋಡೇಇಲ್ಲ, ನೀವೆಲ್ಲರೂ ಇದ್ಯಾಬ್ಯಾಸದಲ್ಲಿ ಕ್ರಾಂಥಿ ಮಾಡಬೇಕು, ಕ್ರಾಂಥಿಯೇ ಜೀವನದ ಮೂಲ ಮಂತ್ರ, ಅದನ್ನು ಮಾಡಲು ನೀವು ಹರ್ರರು."

ಬಂಡ್ಲೇರಗಟ್ಟದ ಇದ್ಯಾರ್ತಿಗಳು ನಿಜಕ್ಕೂ ಕ್ರಾಂತಿಕಾರರು. ಕಳೆದ ವರ್ಷವಿನ್ನೂ ಆ ಶಾಲೆಯಲ್ಲಿ ಶೇ. 18 ರಿಸಲ್ಟ್ ಬಂದಿತ್ತು. ಗ್ರಾಮಾಂತರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ವರ್ಷ ಸ್ಥಳದಲ್ಲೇ ಪರೀಕ್ಷಾಕೇಂದ್ರ ಬಂದು, ಅಲ್ಲಿ ಚುರುಕಾಗಿ ಕೆಲಸ ನಡೆದು ಶೇ 81 ಮಂದಿ ಉತ್ತೀರ್ಣರಾಗಿದ್ದಾರೆ. ಶಾಲೆ ಸಮಾಜದ ಚಟುವಟಿಕೆಯ ಕೇಂದ್ರವಲ್ಲದೇ. ಶಿಕ್ಷಕರೂ ಸಾಮಾಜಿಕರೂ ಹುರುಪಿನಿಂದ ದುಡಿದು ಇಂತಹ ಕ್ರಾಂತಿಯು ಕನಸಿನಲ್ಲೇ ಉಳಿಯದೆ ನನಸಿಗೂ ಬರುವಂತೆ ಮಾಡಿದ್ದಾರೆ, ಹುದ್ಘಾಟಕರಿಗೂ ಇದು ಗೊತ್ತು, ಆದರೆ ಅವರದು ಪೂರ್ಣಕ್ರಾಂತಿಯ ಹಂಬಲ, ಯಾರಿಗೂ ಹೇಳೋಣುಬ್ಯಾಡ

*　　*　　*

ಹಿಂದಿನಿಂದ: ಕೇವಲ 210 ಶಾಲೆಕಾಲೇಜುಗಳು ಆರಂಭವಾಗುತ್ತವಂತೆ. ಕಡಿಮೆ ಉದ್ಯೋಗಾವಕಾಶಗಳು ಅವಕಾಶವಿಲ್ಲದವರಿಗೆ ಅನುಕಂಪ.

ಪಥ್ಯಪಾಲನೆ **ಡಾ. ಕೆ. ಎ. ಅಶೋಕ ಪೈ.**

ಪಥ್ಯಪಾಲನೆ ರೋಗಭ್ರಮೆಯುಳ್ಳ ಅಭಾಗ್ಯರ ಮನ ಸಂತೈಸುವ ಏಕೈಕ ಸಾಧನೆ ಅದರ ಮೂಲತತ್ವ ಇಷ್ಟೇ ದೇಹದ ಪ್ರಕೃತಿಗೆ ಕೆಲವೊಂದು ಪದಾರ್ಥಗಳು ಅಗತ್ಯ.... ಕೆಲವೊಂದು ಅನೂರ್ಜಿತ.... ಅದರಂತೆಯೇ ಕಾಯಿಲೆ ಕಸಾಲೆಗಳುಂಟಾದ ರೋಗ ವೃದ್ಧಿಗೆ ಹಾಗೂ ರೋಗ ತಡೆಗೆ ಕೆಲವು ಪಥ್ಯಗಳು ಸಹಾಯಕಾರಿ ಅಥವಾ ಅಸಹಾಯಕಾರಿ.... ಪಥ್ಯದಲ್ಲಿ ಹಲವಾರು ಬಗೆಗಳು.... ಔಷಧಿ ಪಥ್ಯ.... ಆಹಾರ ಪಥ್ಯ, ವಾತಾವರಣದ ಪಥ್ಯ.... ಇತ್ಯಾದಿ.... ವೈಜ್ಞಾನಿಕ ವಿಂಗಡನೆಯಲ್ಲಿ ಡಾಕ್ಟರು ಹೇಳುವ Therapeutic ಪಥ್ಯ. Curative ಪಥ್ಯ ಹಾಗೂ Prophylactic ಪಥ್ಯ. ಗೋಕಾಕ್ ಚಳವಳಿಯ ನಂತರದಲ್ಲಿ ಇದನ್ನು ನಾವು ಚಿಕಿತ್ಸಾ ಪಥ್ಯ, ಗುಣಪಡಿಸುವ ಪಥ್ಯ ಹಾಗೂ ರೋಗತಡೆಯ ಪಥ್ಯ ಎಂದು ವಿಂಗಡಿಸಬಹುದು.

ನಮ್ಮ ಚಿಕ್ಕಪ್ಪ ಒಬ್ಬರಿದ್ದಾರೆ. ವಾತದ ನೋವು....ಕೀಲುಮುರಿತ.... ಸೊಂಟ ಎಳೆತ....ಹೀಗೆ ಶ್ರೀಮಂತರ ಖಾಹಿಲೆ ಇವರಿಗೆ ... Allopathy Homeopathy ಎಲ್ಲಾ ಪತಿಗಳನ್ನು ಮುಗಿಸಿ ಆಯುರ್ವೇದದ ಸತಿಗೆ ಶರಣಾದೆ ಪಂಡಿತರು, ನಿಷ್ಣಾಂತರು... ಖ್ಯಾತರು.... ಆಯುರ್ವೇದದ ಸಾರವನ್ನೇ ಅರೆದು ಕುಡಿದ ಚಾಣಾಕ್ಷರು....ರೋಗ ಚರಿತ್ರೆಯನ್ನು ಕೂಲಂಕಷವಾಗಿ ವಿವರಣೆ ಕೇಳಿದರು. ಹಳೆಯ ಓಲೆ ಗರಿಯಲ್ಲಿದ್ದ ಸಾಹಿತ್ಯವನ್ನು ಕನ್ನಡಕವನ್ನೇರಿಸಿ ಎರಡೆರಡು ಬಾರಿ ಸಂಸ್ಕೃತದಲ್ಲಿ ಓದಿದರು. ನಶ್ಯಾ ಸೇದುತ್ತೀರಾ, ಧೂಮಪಾನ....ಮದ್ಯಸೇವನೆ....ಇಲ್ಲ ಎಂದರು. ನಮ್ಮ ಚಿಕ್ಕಪ್ಪ ಜಾರೆಯರ ಸಹವಾಸ ? ನೆನಪಿಲ್ಲ!! ಕೊನೆಗೆ ರೋಗ ನಿರ್ಣಯ ವನ್ನು ಮಂಡಿಸಿದರು. ನೋಡಿ ನಿಮಗೆ ವಾತ ಬೇನೆ—ಇದಕ್ಕೆ ಖಚಿತವಾದ ಚಿಕಿತ್ಸೆ ನಮ್ಮಲ್ಲಿದೆ—ಗಾಬರಿಯಾಗಬೇಕಾದ ಅವಶ್ಯಕತೆಯಿಲ್ಲ. ಲೇಹ್ಯವನ್ನು ಅವ್ಯಾಹತ ವಾಗಿ ಅನುಕ್ರಮವಾಗಿ ದಿನಕ್ಕೆ ನಾಲ್ಕು ಬಾರಿ ಸೇವಿಸಬೇಕು, ಈ ಎಣ್ಣೆಯನ್ನು ಮೂರು ಬಾರಿ ದಿನಕ್ಕೆ ಒಂದು ಘಂಟೆಯಂತೆ ತಿಕ್ಕಬೇಕು, ಸರಿ ಎಂದೆವು. ಆದರೆ ಇನ್ನೊಂದು ಮಾತು.... ಪಥ್ಯ ಬಹಳ ಮುಖ್ಯ. ಶೀತ, ವಾತ, ವಾಯು, ಪದಾರ್ಥ ಗಳು ನಿಶಿದ್ಧ. ಬಳ್ಳಿಯಲ್ಲಿ ಬೆಳೆಯುವ ತರಕಾರಿ ತಿನ್ನಕೂಡದು. ಮರದಲ್ಲಿ ಬೆಳೆಯು ವ ಫಲ ಸೇವನೆ ನಿಶಿದ್ಧ. ಕೃತಕ ಗೊಬ್ಬರ ಹಾಕಿ ಬೆಳೆಸುವ ಧಾನ್ಯಗಳು ಪದಾರ್ಥ ಗಳು ತಿನ್ನಲೇ ಕೂಡದು. ತಿಳಿಯಿತೇನು?....ನಡುವೆಯೇ ನಾನು ಬಾಯಿ ಹಾಕಿದೆ.... ನೋಡಿ ಪಂಡಿತರೇ, ಇವರಿಗೆ ಡಯಾಬಿಟಿಸ್ ಖಾಹಿಲೆಯುಂಟು....ಸಕ್ಕರೆ, ಅನ್ನ ವನ್ನು ಸಂಪೂರ್ಣ ಬಿಟ್ಟಿದ್ದಾರೆ....ಬಿ.ಪಿ. ಲಕ್ಷಣಗಳಿರೋದಕ್ಕೆ....ಉಪ್ಪು ತಿನ್ನುತ್ತಾ

ಇಲ್ಲ ಓಗೆ ಎಲ್ಲಾ ಪಥ್ಯ ಮಾಡಿದರೆ ಜೀವಿಸುವುದು ಹೇಗೆ?....ಜೀವಿಸಿದ್ದಕ್ಕೆ ಏನುಸಾರ್ಥಕ....ಸ್ವಲ್ಪ ಪಥ್ಯದಲ್ಲಿ ಕನ್‌ಫಿಷನ್ ಕೊಡಿಸ್ವಾಮಿ ... 'ಖಂಡಿತಾ ಕೂಡ ದು'....ನಮ್ಮ ಶಾಸ್ತ್ರದ ನಿಲುವೇ ಕಟ್ಟು ನಿಟ್ಟಾದ ನಿಯಮ ಪಾಲನೆ ತಿಳಿತೇನು?.... ಇಷ್ಟೇ ಅಲ್ಲಾ .. ಏರುಹತ್ತುವ ಹಾಗಿಲ್ಲ....ತಗ್ಗಿನಲ್ಲಿ ನಡೆಯುವ ಹಾಗಿಲ್ಲ....ದಿನಾ 2 ಮೈಲು ಮಟ್ಟಸವಾದ ರಸ್ತೆಯಲ್ಲಿ ನಡೆಯಬೇಕು....ಅದು ಅಸಾಧ್ಯ ಪಂಡಿತರೆ.... ನಮ್ಮ ಊರಿನಲ್ಲಿ ಮಟ್ಟಸವಾದ ರಸ್ತೆಯೇ ಇಲ್ಲ.... ಹೊಸ ಮುನ್ಸಿಪಾಲಿಟಿ ಬಂದರೂ ರಸ್ತೆಗಳು ಅದೇ ಮಟ್ಟದಲ್ಲಿದೆ ಏನು ಮಾಡೋಣ?....ಸರಿ....ಇವೆಲ್ಲ ಪಥ್ಯಗಳನ್ನು ನಾವು ಕಟ್ಟುನಿಟ್ಟಾಗಿ ಆಚರಿಸುತ್ತೇವೆ....ಒಂದು ಪ್ರಶ್ನೆ ಅವರು ಫ್ರೀ ಆಗಿ ಉಸಿರಾಡಬಹುದಲ್ಲ! ಅದಕ್ಕೇನೂ ಪಥ್ಯವಿಲ್ಲವಲ್ಲಾ ....ಪಂಡಿತರು ನಕ್ಕರು.... ತಮಾಷೆ ಮಾಡ್ತಿ ಏನಯ್ಯ.... ಸರಿ ಹೊತ್ತಾಯಿತು....ನಾನು ಹೋಗಬೇಕು....ನಿಮ್ಮ ಮೂಳೆ ಡಾಕ್ಟರ್ ವೆಂಕಟ್ರಾಯರ ಹತ್ತಿರ ಅಪಾಯಿಂಟ್‌ಮೆಂಟ್ ಇದೆಯಲ್ಲಾ ಇನ್ನು ಅರ್ಧ ಘಂಟೆಗೆ .. ಲೇಟಾದ್ರೆ ಸಿಟ್ಟಾಗ್ತಾರೆ ಅವರು....

''ತಮಗೇನು ಸ್ವಾಮಿ ತೊಂದರೆ'' ಮೂಳೆ ಡಾಕ್ಟರರ ಹತ್ತಿರ ಅಪಾಯಿಂಟ್‌ಮೆಂಟ್ ''ಅದೇನು ಹಾಳಾದ್ದು Cervical Spondylitis ಅಂತೆ, ಕತ್ತಿಗೆ ಕಾಲರ್ ಹಾಕ ಲೇಬೇಕು ಎಂದು ಹೇಳಿದ್ದಾರೆ. ನಿಮ್ಮ ಶಾಸ್ತ್ರದಲ್ಲಿ ಅದಕ್ಕೆ ಗ್ಯಾರಂಟಿ ಔಷಧವಿಲ್ಲ ವೇನು? ''ಇದೆಯಪ್ಪಾ ಇದೆ....ಆದರೆ ಈ ವಯಸ್ಸಿನಲ್ಲಿ ಯಾರು ಪಥ್ಯ ಮಾಡುವು ದು ಹೇಳು ಮೇಲಾಗಿ ನನಗೆ ಆ ಲೇಹ್ಯದ ಅಲರ್ಜಿ ಇದೆ....ತಿಂದೊಡನೇ ಮೈ ಕೆರೆತ....ಮುಖವೆಲ್ಲಾ ಊತ,

ಸರಿಹೋಯ್ತು....ಅಲೋಪತಿ ಡಾಕ್ಟರರ ಪಥ್ಯ ಇನ್ನಷ್ಟು ತಮಾಷೆ... ನಿನಗೆ ಅನೀಮಿಯಾ ಆಗದೆ ಕಣಯ್ಯ. ಹಾಗೂ ಮಾಲ್‌ನ್ಯೂಟ್ರೀಶನ್....ಚೆನ್ನಾಗಿ ಹಾಲು ಹಣ್ಣು ಹಂಪಲು ತೆಗೆದುಕೋ....ವಾರದಲ್ಲಿ ಎರಡು ಮೂರು ಬಾರಿ ಮಾಂಸ ತಿನ್ನ ಬಹುದು....ಸಾಧ್ಯವಿದ್ದರೆ Dry fruits ಬಾದಾಮಿ, ಉತ್ತುತ್ತೆ ಕಲ್ಲುಸಕ್ಕರೆ.... ಅಮೂ ತಿಂದರೆ ಅಪಥ್ಯ ವಾಗೋದಿಲ್ಲಾ....ತಿ ಳಿ ತೇ ನು....ರೋ ಗಿ ಯ ಪ್ರತಿಕ್ರಿಯೆ "ತಿಳಿತು ಸ್ವಾಮಿ ಚೆನ್ನಾಗಿ ತಿಳೀತು....ಆದರೆ ಇವತ್ತಿನ ಔಷಧಿಗೆ ನಿಮಗೆ ಕೊಡಲು ದುಡ್ಡು ಇಲ್ಲಾ.... ಮುಂದಿನ ಸರ್ತಿ ಬಂದಾಗ ಕೊಡ್ತೀನೆ ಆಗಬಹುದು ತಾನೇ?" ಸಹೋದ್ಯೋಗಿಯೊಬ್ಬರು ಸ್ವಾರಸ್ಯಕರವಾಗಿ ಹೇಳುತ್ತಿದ್ದರು...."ಏನಯ್ಯ ನನಗೆ ರಕ್ತ ತುಂಬಾ ಕಡಿಮೆಯಾಗಿದೆ....ಏನು ಕಾರಣವಿರಬಹುದು"....ರೋಗಿ ಪ್ರತಿ ಕ್ರಿಯೆ "ಇನ್ನೇನು ಇರಬಹುದು ಸ್ವಾಮಿ, ಕಳೆದ ಮೂರು ತಿಂಗಳಿಂದ ನಿಮ್ಮನ್ನು ಕಾಣುತ್ತಿದ್ದೇನೆ....."

ಇನ್ನೂ ಒಂದು ಸಂದರ್ಭ....ನನಗೂ ಪಥ್ಯದ ಬಗ್ಗೆ ಸಲಹೆ ನೀಡುವ ಅವಕಾಶ

ಬಂದಿತ್ತು.... 78ವರ್ಷದ ಹಣ್ಣುಮುದುಕರು.... ನರದೌರ್ಬಲ್ಯಕ್ಕೆ ಚಿಕಿತ್ಸೆ ನಡೆದಿದೆ.... ಪರೀಕ್ಷೆ ಮುಗಿದು, ಸಲಹಾ ಭೇಟಿ ಕೊಟ್ಟನಂತರ ಸಂಕೋಚದಿಂದ ಆ ಯಜಮಾನರು ಪ್ರಶ್ನಿಸಿದರು...."ಒಂದೇ ಪ್ರಶ್ನೆ! ಡಾಕ್ಟರೇ!" "ಕೇಳಿ ಅದಕ್ಕೇನು ಸಂಕೋಚ?".... ಅತ್ತಾ ಇತ್ತಾ, ಸುತ್ತ ಮುತ್ತಾ ನೋಡಿ ಕೇಳಿದರು. "ಇದಕ್ಕೇನಾದರೂ ಹಾಸಿಗೆ ಪಥ್ಯ ಇದೆಯೇನು?....

ನನಗೆ ಉಸಿರು ಸಿಕ್ಕಿತು, ಎದೆ ಧಸಕ್ಕೆಂದಿತು.... ನನ್ನ ಪರಿಸ್ಥಿತಿ ನೋಡಿ ಯಜಮಾನರು ನಕ್ಕರು.


"ಸಂಕೋಚ ಪಡದೆ ಹೇಳಿ ಡಾಕ್ಟರೆ."

ಇನ್ನೊಂದು ನಗೆಹನಿ. **ಚಿ. ರಾ. ಅಣ್ಣಾಜಿ.**

ಶತಮೂರ್ಖಸ್ಯ ಯಾಗೋಽಯಂ
ಮಹಿಷೀ ಶತ ದಕ್ಷಿಣಾ
ಮಯಾಪ್ಯರ್ಧಂ ತವಾಪ್ಯರ್ಧಂ-
(ಪಂಡಿತಾಯ ಸ್ವಾಹಾ)

ಇದು ಶತಮೂರ್ಖನ ಯಾಗವು, ಋತ್ವಿಕ್ಕುಗಳಿಗೆ ನೂರು ಎಮ್ಮೆಗಳ ದಕ್ಷಿಣೆ. ಎಲೆ ಪಂಡಿತಾ ನೀನೀಗ ಇದಕ್ಕೆ ಅಡ್ಡಿಮಾಡಬೇಡ, ನೀನು ಸುಮ್ಮನಿದ್ದರೆ ದಕ್ಷಿಣೆಯಲ್ಲಿ ಅರ್ಧ ನಿನಗೆ (ಎಂದು ಆಚಾರ್ಯನು ಪಂಡಿತಾಯ ಸ್ವಾಹಾ ಎಂದು ಸ್ವಾಹಾಕಾರವನ್ನಿತ್ತನು).





No. 23 AL/84-NT III

ಶುಭಾಶಯಗಳೊಂದಿಗೆ :-

ಸ್ಕೈಲಾರ್ಕ್ ಆ್ಯನ್ಸಿಲರೀಸ್ ಕಾರ್ಪೋರೇಷನ್

ಎ-188, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್,
ಬೆಂಗಳೂರು-560 058.

ಮುದ್ರಕರು : ಶ್ರೀ ವೆಂಕಟೇಶ್ವರ ಪವರ್ ಪ್ರಿಂಟರ್ಸ್ ಪ್ರೈ. ಲಿ.,
ಪೀಣ್ಯ, ಬೆಂಗಳೂರು-58.